

ಡಾ. ಬಸವರಾಜ ಸಬರದ

# ಕಾವ್ಯಾನಂದರ ವಚನದ ಹೊಸ ಓದು

[illegible] ಪಿ.ಕೆ. [illegible]

ಅವರಿಗೆ

ಪ್ರೀತಿ ಪೂರ್ವಕ

[signature]

(ಡಾ. [illegible])

9886619220

# ಕಾವ್ಯಾನಂದರ ವಚನಗಳ ಹೊಸ ಓದು

ಡಾ. ಬಸವರಾಜ ಸಬರದ

ಪ್ರಸಾರಾಂಗ
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ-೫೮೫ ೧೦೬

KAVYANANDARA VACHANAGALA HOSA ODU

*Written by*
**Dr. Basavaraj Sabarad**
Rtd. Prof. of Kannada Gulbarga Unviersity, Kalaburagi-585 106

*Published by*
**Prof. H.T. Pote**
Director, Prasaaranga
Gulburga University, Kalaburagi

First Impression : 2016
© : Authors
Paper used : 80 gsm. N.S. Maplitho
Pages : viii + 50 = 58
Copies : 1000
Price : **Rs. 20/-**

ಮೊದಲ ಮುದ್ರಣ : ೨೦೧೬
ಹಕ್ಕುಗಳು : ಲೇಖಕರು
ಬಳಸಿದ ಕಾಗದ : ೮೦ ಜಿಎಸ್‌ಎಂ ಎನ್.ಎಸ್.ಮ್ಯಾಪ್‌ಲಿಥೊ
ಪುಟಗಳು : viii + 50 = 58
ಪ್ರತಿಗಳು : ೧೦೦೦
ಬೆಲೆ : ರೂ.

**ಕಾವ್ಯಾನಂದರ ವಚನಗಳ ಹೊಸ ಓದು**

ಲೇಖಕರು
**ಡಾ. ಬಸವರಾಜ ಸಬರದ**
ಪ್ರೊಫೆಸರ್, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಪ್ರಕಾಶಕರು
**ಪ್ರೊ. ಎಚ್.ಟಿ. ಪೋತೆ**
ನಿರ್ದೇಶಕರು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಮುದ್ರಣ
**ಚೈತ್ರಾ ಎಂಟರ್‌ಪ್ರೈಸಸ್**
ಬೆಂಗಳೂರು

# ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆಯ ಜೊತೆಗೆ ಪ್ರಸರಣ ಕಾರ್ಯವನ್ನು ಮಾಡುತ್ತ ಬಂದಿದೆ. ಪ್ರಸಾರಾಂಗದ ಮೂಲಕ ಹಲವು ಮೌಲಿಕ ಕೃತಿಗಳನ್ನು ಪ್ರಕಟಿಸುತ್ತ ಬಂದುದು ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಪಠ್ಯಪುಸ್ತಕಗಳ ಪ್ರಕಟಣೆಯ ಜೊತೆಗೆ ಸಾಹಿತ್ಯ ಸಂಕಲನ ಮಾಲೆ, ದತ್ತಿ ಉಪನ್ಯಾಸ, ಸಾಮಾನ್ಯ ಪುಸ್ತಕಗಳಲ್ಲದೆ 'ಪ್ರಚಾರೋಪನ್ಯಾಸ' ಪುಸ್ತಕ ಮಾಲೆ ಅತ್ಯಂತ ಮಹತ್ವಪೂರ್ಣ ಯೋಜನೆಗಳಲ್ಲೊಂದಾಗಿದೆ.

ಗ್ರಾಮೀಣ ಪ್ರದೇಶದ ಅಲ್ಲಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ. ವಿಶ್ವವಿದ್ಯಾಲಯ ಹಾಗೂ ಕಾಲೇಜು ಪ್ರಾಧ್ಯಾಪಕರಲ್ಲಿರುವ ಜ್ಞಾನ ಕೇವಲ ಪಟ್ಟಣ ಪ್ರದೇಶದ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗ ಬಾರದು ಅದು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೂ, ಜನಸಾಮಾನ್ಯರಿಗೂ ಲಭಿಸುವಂತಾಗಬೇಕು. ಜೊತೆಗೆ ಜ್ಞಾನಸಂಪತ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ಎಲ್ಲರಿಗೂ ದೊರೆಯುವಂತಾಗಬೇಕು. ಎನ್ನುವುದೇ ಪ್ರಚಾರೋಪನ್ಯಾಸ ಮಾಲಿಕೆಯ ಮುಖ್ಯ ಗುರಿಯಾಗಿದೆ. ಪ್ರಚಾರೋಪನ್ಯಾಸ ಮಾಲಿಕೆಯ ಉಪನ್ಯಾಸಗಳ ಪರಿಣಾಮವಾಗಿ ವಿಶ್ವವಿದ್ಯಾಲಯ ಜನತೆಯ ಹತ್ತಿರವಾದಂತೆ ಭಾವಿಸುತ್ತದೆ. ಇಲ್ಲಿ ಕಲೆ, ಸಮಾಜ ವಿಜ್ಞಾನ, ತಂತ್ರಜ್ಞಾನ, ವೈದ್ಯ ವಿಜ್ಞಾನ, ವಾಣಿಜ್ಯ ಹೀಗೆ ಎಲ್ಲ ಜ್ಞಾನ-ವಿಜ್ಞಾನಗಳ ಸಂಗಮ ಪ್ರಚಾರೋಪನ್ಯಾಸಗಳ ಅಂತರಾಳದಲ್ಲಡಗಿದೆ.

ಪ್ರಚಾರೋಪನ್ಯಾಸ ಯೋಜನೆಯಡಿ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲ ಲೇಖಕರ ಬಳಗಕ್ಕೆ ಅನಂತ ಧನ್ಯವಾದಗಳು. ಉಪನ್ಯಾಸಗಳನ್ನು ಏರ್ಪಡಿಸಿದ ಸಂದರ್ಭದಲ್ಲೆಲ್ಲ ಭಾಗವಹಿಸಿ ಪ್ರೋತ್ಸಾಹ ನೀಡಿದ ಗ್ರಾಮೀಣ ಜನತೆಗೂ, ಪ್ರಸಾರಾಂಗದ ನಿರ್ದೇಶಕರಿಗೂ ಹಾಗೂ ಅವರ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆಗಳು.

ಪ್ರೊ. ಎಸ್.ಆರ್. ನಿರಂಜನ
ಕುಲಪತಿಗಳು
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

## ನಿರ್ದೇಶಕರ ನುಡಿ

ವಿಶ್ವವಿದ್ಯಾಲಯದ ಒಂದು ಮುಖವಾಣಿಯಂತೆ ಕೆಲಸ ಮಾಡುತ್ತಿರುವ ಅಂಗ ಪ್ರಸಾರಾಂಗ. ಅದಕ್ಕೆ ತನ್ನದೇ ಆದ ಪ್ರಮುಖ ಜವಾಬ್ದಾರಿಯೂ ಇದೆ, ಪ್ರತ್ಯೇಕ ಸ್ಥಾನಮಾನವೂ ಇದೆ. ಜ್ಞಾನ ಪ್ರಸಾರ ಮಾಡುವ ಒಂದು ಪ್ರಮುಖ ಅಂಗವಾಗಿ ಎಲ್ಲರಿಗೂ ಪ್ರಿಯವಾಗಿ ಸ್ತುತ್ಯಾರ್ಹ ಕಾರ್ಯದಲ್ಲಿ ನಿರತವಾಗಿದೆ. ವಿಶ್ವವಿದ್ಯಾಲಯ ಮತ್ತು ಗ್ರಾಮೀಣ ಜನತೆಯ ನಡುವಿನ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಲಬುರಗಿ, ಬೀದರ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ನೂರಾರು ಜನ ಶಿಕ್ಷಕರು ವಿದ್ವಾಂಸರಿಂದ ಪ್ರಸಾರಾಂಗದ ಮೂಲಕ ಪ್ರಚಾರೋಪನ್ಯಾಸ ಗಳನ್ನು ಹಲವಾರು ವರ್ಷಗಳಿಂದ ಏರ್ಪಡಿಸುತ್ತ ಬಂದಿದೆ.

ಪಠ್ಯಪುಸ್ತಕಗಳ ರಚನೆಯ ಜೊತೆಗೆ ಸಂಶೋಧನ ಪತ್ರಿಕೆ, ದತ್ತಿ ಉಪನ್ಯಾಸ, ಸಾಹಿತ್ಯ ಸಂಕಲನ ಮಾಲೆ, ಸಾಮಾನ್ಯ ಪುಸ್ತಕ ರಚನೆ, ಗಡಿನಾಡು ಲೇಖಕರಿಗೆ ಪ್ರೋತ್ಸಾಹ, ಕನ್ನಡ ಲೇಖಕರಿಗೆ, ಜನಪದ ಸಾಹಿತ್ಯ ಲೇಖಕರಿಗೆ, ಅನುವಾದ ಸಾಹಿತ್ಯ ಲೇಖಕರಿಗೆ, ಜನಪದ ಕಲಾವಿದರಿಗೆ ರಾಜ್ಯೋತ್ಸವದಂದು ಪ್ರೋತ್ಸಾಹ ಧನ ಮತ್ತು ಪ್ರಶಸ್ತಿ ನೀಡುವ ಯೋಜನೆಯ ಜೊತೆಗೆ ಬಹು ಮಹತ್ತರವಾದ ಪ್ರಚಾರೋಪನ್ಯಾಸಗಳನ್ನು ಗ್ರಾಮೀಣ ಪ್ರದೇಶದಲ್ಲಿ ಏರ್ಪಡಿಸಿ ವಿಶ್ವವಿದ್ಯಾಲಯದ ವಿದ್ವಾಂಸರ ವಿದ್ವತ್ತು ಜನಸಾಮಾನ್ಯರಿಗೂ ಲಭಿಸುವಂತಾಗ ಬೇಕು. ಹಳ್ಳಿಗಳು ಮೈದುಂಬಿ ಬೆಳೆಯಬೇಕು ಎನ್ನುವ ಉದ್ದೇಶ ಪ್ರಚಾರೋಪನ್ಯಾಸಗಳ ಹಿಂದಿನ ಮರ್ಮವಾಗಿದೆ.

ಹಿಂದಿನ ಅವಧಿಯಲ್ಲಿ ಪ್ರಕಟವಾದ ಪ್ರಚಾರೋಪನ್ಯಾಸಗಳಿಗಿಂತಲೂ ಈ ಮಾಲೆಯಡಿ ಪ್ರಕಟವಾದ ಪುಸ್ತಕಗಳ ರಚನಾ ವಿನ್ಯಾಸ ವಿಭಿನ್ನವಾಗಿದೆ. ಅಂಗೈ-ಅಗಲದ ಪುಸ್ತಕಗಳಿಂದ ದೊಡ್ಡ ಆಕಾರಕ್ಕೆ ಪುಸ್ತಕಗಳು ತಿರುಗಿ ತನ್ನ ಅಂದಚೆಂದವನ್ನು ಹೆಚ್ಚಿಸಿಕೊಂಡಿವೆ. ಸಲಹಾ ಸಮಿತಿಯ ಸದಸ್ಯರು ಇದಕ್ಕೆ ಅನುಮೋದನೆ ನೀಡಿರುವ ಪರಿಣಾಮವಾಗಿ ಹೊಸ ಆಕಾರಕ್ಕೆ ತಿರುಗಿವೆ. ಲೇಖಕರೂ, ಕಾಲೇಜು ಗ್ರಂಥಪಾಲರು, ಓದುಗ ವಿದ್ವಾಂಸರೂ ಇದೇ ಮಾದರಿಯಲ್ಲಿ ಪುಸ್ತಕಗಳು ಇರಬೇಕೆಂದು ಸಲಹಾ ಸಮಿತಿಗೆ ವಿನಂತಿಸಿ ಕೊಂಡಿದ್ದರ ಪರಿಣಾಮ ಈ ಮಾಲೆಯಡಿ ಪುಸ್ತಕಗಳು ಈಗ ಪ್ರಕಟ ವಾಗುತ್ತಿವೆ. ಕಲಬುರಗಿ, ಯಾದಗಿರ, ಬೀದರ, ರಾಯಚೂರು ಜಿಲ್ಲೆಗಳಲ್ಲಿ ಕ್ರಮವಾಗಿ ಪ್ರಚಾರೋಪನ್ಯಾಸ ಶಿಬಿರಗಳು ಯಶಸ್ವಿಯಾಗಿ ನಡೆದು, ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿರುವುದು ಸಂತೋಷದ ವಿಚಾರವಾಗಿದೆ.

ಪ್ರಸಾರಾಂಗದ ಎಲ್ಲ ಕಾರ್ಯಚಟುವಟಿಕೆಗಳಿಗೆ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸುತ್ತಿರುವ ಮತ್ತು ಪ್ರಚಾರೋಪನ್ಯಾಸ ಮಾಲಿಕೆಯ ಎಲ್ಲ ಕೃತಿಗಳಿಗೆ ಮುನ್ನುಡಿ ಬರೆದುಕೊಟ್ಟ ನಮ್ಮ ಗೌರವಾನ್ವಿತ ಕುಲಪತಿಗಳಾದ ಪ್ರೊ.ಎಸ್.ಆರ್. ನಿರಂಜನ ಅವರಿಗೆ ಗೌರವಪೂರ್ವಕ ವಂದನೆಗಳು. ಸಲಹೆ-ಸೂಚನೆಗಳನ್ನು ನೀಡಿ ಸಹಕರಿಸುತ್ತಿರುವ ನಮ್ಮ ಕುಲಸಚಿವರಾದ ಪ್ರೊ. ಅಗಸರ್ ದಯಾನಂದ ಅವರನ್ನು, ವಿತ್ತಾಧಿಕಾರಿಗಳನ್ನು ಪ್ರೀತಿಯಿಂದ ಸ್ಮರಿಸುತ್ತೇನೆ. ಪ್ರಸಾರಾಂಗದ ಸಲಹಾ ಸಮಿತಿ ಸದಸ್ಯರಿಗೂ, ಪ್ರಚಾರೋಪ ನ್ಯಾಸಗಳಲ್ಲಿ ಭಾಗವಹಿಸಿದ ಗ್ರಾಮೀಣ, ಜನತೆಗೂ ಕಾಲೇಜು ಶಿಕ್ಷಕ - ಶಿಕ್ಷಕೇತರ ಸಿಬ್ಬಂದಿ ವರ್ಗಕ್ಕೂ ಧನ್ಯವಾದಗಳು.

ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಬೆಂಗಳೂರು ಚೈತ್ರಾ ಪ್ರಿಂಟರ್ಸ್‌ನ ಸುರೇಶಬಾಬು ಮತ್ತು ಅವರ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆಗಳು.

**ಪ್ರೊ. ಎಚ್.ಟಿ. ಪೋತೆ**
ನಿರ್ದೇಶಕರು, ಪ್ರಸಾರಾಂಗ
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

# ಲೇಖಕರ ನುಡಿ

೨೦೦೯ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥನಾಗಿದ್ದಾಗ ಸಿದ್ಧಯ್ಯ ಪುರಾಣಿಕರನ್ನು ವಿಶೇಷ ಕವಿಯಾಗಿ ಅಧ್ಯಯನ ಮಾಡಬೇಕೆಂದು ಪಠ್ಯ ರೂಪಿಸಿದ್ದೆವು. ಆ ಸಂದರ್ಭದಲ್ಲಿ "ಕಾವ್ಯಾನಂದರ ಆಯ್ದ ವಚನಗಳು" ಎಂಬ ಪಠ್ಯಪುಸ್ತಕವನ್ನು ನಾನೇ ಸಿದ್ಧಪಡಿಸಿಕೊಟ್ಟಿದ್ದೆ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಆ ಪುಸ್ತಕ ಪ್ರಕಟವಾಯಿತು.

ಆ ಪುಸ್ತಕಕ್ಕೆ ಪ್ರಸ್ತಾವನೆ ಬರೆಯುವ ಸಂದರ್ಭ ಬಂದಾಗ ನಾನು ಕಾವ್ಯಾನಂದರ ಎಲ್ಲ ವಚನಗಳನ್ನು ಓದಿದೆ. ತುಂಬ ವೈವಿಧ್ಯಮಯವಾದ ರಚನೆಗಳು. ಹದಿನೈದು ನೂರಕ್ಕೂ ಹೆಚ್ಚು ವಚನಗಳನ್ನು ರಚಿಸಿರುವ ಇದೇ ವಿಷಯವನ್ನಿಟ್ಟುಕೊಂಡು ಪ್ರಸಾರಾಂಗದ ಪ್ರಚಾರೋಪನ್ಯಾಸ ಮಾಲೆಯಲ್ಲಿ ಪ್ರಬಂಧ ಮಂಡಿಸಿದೆ. ಕಾವ್ಯಾನಂದರ ವಚನಗಳನ್ನು ಹೊಸ ರೀತಿಯಿಂದ ಆಲೋಚಿಸಬೇಕೆನಿಸಿತು. ಹೀಗಾಗಿ ಆ ಪ್ರಸ್ತಾವನೆಯನ್ನೇ ವಿಸ್ತರಿಸಿದಾಗ ಈ ಪುಟ್ಟ ಕೃತಿ ಹುಟ್ಟಿಕೊಂಡಿದೆ. ಪುರಾಣಿಕರ ವಚನಗಳನ್ನು ಕುರಿತಂತೆ ಕೆಲವು ಲೇಖನಗಳು ಈಗಾಗಲೇ ಪ್ರಕಟವಾಗಿವೆ. ಆದರೆ ಈ ಕೃತಿ ಇವತ್ತಿನ ಸಂದರ್ಭದಲ್ಲಿ ಪುರಾಣಿಕರನ್ನು ಮರು ಓದಿಗೆ ಹಚ್ಚುವ ಪ್ರಯತ್ನವಾಗಿದೆ. ಈ ಕೃತಿಯನ್ನು ಪ್ರಕಟಿಸಿರುವ ಪ್ರಸಾರಾಂಗ ನಿರ್ದೇಶಕರಾಗಿರುವ ಪ್ರೊ.ಎಚ್.ಟಿ. ಪೋತೆಯವರಿಗೆ ಮತ್ತು ಪ್ರಕಾಶಕರಿಗೆ ಹಾಗೂ ಓದುಗರಿಗೆ ಕೃತಜ್ಞತೆಗಳು.

೧೧ ಜೂನ್ ೨೦೧೫ **ಡಾ.ಬಸವರಾಜ ಸಬರದ**

## ಪರಿವಿಡಿ

ಕುಲಪತಿಗಳ ನುಡಿ / iii
ನಿರ್ದೇಶಕರ ನುಡಿ / v
ಲೇಖಕರ ನುಡಿ / vii

೧. ಪೀಠಿಕೆ / ೧
೨. ಜೀವ-ದೇವ ಸಂಬಂಧ / ೪
೩. ಪ್ರಕೃತಿ / ೮
೪. ಚಿಂತನ - ಮಂಥನ / ೧೨
೫. ಸಾಮಾಜಿಕ ವಿಡಂಬನೆ / ೧೮
೬. ಸಂಪ್ರದಾಯ - ಮೂಢ ನಂಬಿಕೆ / ೨೪
೭. ಸತಿ-ಪತಿ-ಭಾವ / ೨೮
೮. ಪ್ರೀತಿಯ ಅನಂತತೆ / ೩೨
೯. ಮಹಿಳೆ / ೩೬
೧೦. ಸಮಾರೋಪ / ೪೧

ಅನುಬಂಧ - I ಕವಿ ಪರಿಚಯ / ೪೫
II ಕಾವ್ಯಾನಂದರ ಕೃತಿಗಳ ವಿವರ / ೪೭

## ಪೀಠಿಕೆ

"ವಚನ" ಎನ್ನುವ ಪದ ಬಹುಮುಖಿಯಾದುದಾಗಿದೆ. ಈ ಪದದ ಅರ್ಥಗಳು ಸಂದರ್ಭಕ್ಕೆ ತಕ್ಕಂತೆ ಬದಲಾಗುತ್ತವೆ. ವಚನವೆಂದರೆ ಮಾತು, ನುಡಿ. ಆದರೆ ಹನ್ನೆರಡನೇ ಶತಮಾನದ ಶರಣರ ಅವಧಿಯಲ್ಲಿ "ವಚನ" ಬರಿ ಮತಾಗಿರದೆ, ಅದು ಕೊಟ್ಟ ಮಾತಾಗಿತ್ತು. ವಚನವೆಂದರೆ Promise ಎಂದರ್ಥ. ವಚನಕಾರರು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದ್ದರು. ಕೊಟ್ಟಮಾತಿನಂತೆ ನಡೆದುಕೊಳ್ಳುವುದು, ನಡೆ-ನುಡಿ ಒಂದಾಗಿಸಲು ಪ್ರಯತ್ನಿಸುವುದು ಸಾತ್ವಿಕ ಸಂಸ್ಕೃತಿಯ ಲಕ್ಷಣ. ಹೀಗಾಗಿ "ವಚನ"ವೆಂಬುದು ಸಂಸ್ಕೃತಿಯಾಯಿತು. ಶರಣರು ಹನ್ನೆರಡನೇ ಶತಮಾನದಲ್ಲಿ ಅಸಮಾನತೆಯ ವ್ಯವಸ್ಥೆಯ ಬಗೆಗೆ, ಅನ್ಯಾಯದ ವಿರುದ್ಧ ಚಳುವಳಿ ಮಾಡಿದರು. ಹೀಗಾಗಿ "ವಚನ"ವೆಂಬುದು ಚಳುವಳಿಯಾಯಿತು. ಆ ಕಾಲ ಘಟ್ಟದಲ್ಲಿಯೇ ಶರಣರು ವಚನಗಳ ಮೂಲಕ ಅನೇಕ ವೈಜ್ಞಾನಿಕ ವಿಷಯಗಳನ್ನು ತಿಳಿಸಿದರು; ಹೀಗಾಗಿ ವಚನ ವಿಜ್ಞಾನವಾಯಿತು. ಹೀಗೆ ಹನ್ನೆರಡನೇ ಶತಮಾನದಲ್ಲಿ "ವಚನ"ವೆಂಬ ಪದವು ವಚನ ಸಾಹಿತ್ಯ ರೂಪವಾಗಿ, ವಚನ ಸಂಸ್ಕೃತಿಯಾಗಿ, ವಚನ ಚಳುವಳಿಯಾಗಿ, ವಚನ ವಿಜ್ಞಾನವಾಗಿ ಅರ್ಥೈಸಲ್ಪಟ್ಟಿದೆ. ವಚನಕ್ಕೆ ಅನೇಕ ಅರ್ಥಗಳಿರುವಂತೆ, ಅನೇಕ ಆಶಯಗಳೂ ಇವೆ.

ವಚನಸಾಹಿತ್ಯ ಪರಂಪರೆಯನ್ನು ಬಸವಪೂರ್ವಯುಗ, ಬಸವಯುಗ, ಬಸವೋತ್ತರ ಯುಗ ಹಾಗೂ ಆಧುನಿಕ ಯುಗವೆಂದು ವಿದ್ವಾಂಸರು ಗುರುತಿಸಿದ್ದಾರೆ. ಆದರೆ ಬಸವಪೂರ್ವ ಯುಗದ ಪ್ರಸ್ತಾಪ ಅನಗತ್ಯವೆನಿಸುತ್ತದೆ. ಜೇಡರದಾಸಿಮಯ್ಯ, ಮಾದಾರಚೆನ್ನಯ್ಯ ಮೊದಲಾದ ವಚನಕಾರರು ಬಸವಣ್ಣನವರಿಗಿಂತ ಬಹಳ ಹಿಂದಿನ ಕಾಲಘಟ್ಟದಲ್ಲಿರದೆ, ಅವರೆಲ್ಲ

ಬಸವಣ್ಣನವರ ಹಿರಿಯ ಸಮಕಾಲೀನರಾಗಿದ್ದರೆಂದು ಇತ್ತೀಚಿನ ಸಂಶೋಧನೆಗಳು ತಿಳಿಸುತ್ತವೆ. ಹೀಗಾಗಿ ವಚನಸಾಹಿತ್ಯ ಪರಂಪರೆಯನ್ನು ಬಸವಯುಗ-ಬಸವೋತ್ತರಯುಗ ಮತ್ತು ಆಧುನಿಕಯುಗ ಎಂದು ವರ್ಗೀಕರಿಸುವುದು ಸೂಕ್ತವೆನಿಸುತ್ತದೆ. ಯುಗಧರ್ಮಕ್ಕೆ ತಕ್ಕಂತೆ ಬಸವ ಯುಗದ ಸಾಮಾಜಿಕ ವ್ಯವಸ್ಥೆಗೂ, ಬಸವೋತ್ತರ ಯುಗದ ಸಾಮಾಜಿಕ ವ್ಯವಸ್ಥೆಗೂ ಬಹಳ ವ್ಯತ್ಯಾಸವಿದೆ. ಅದೇರೀತಿ ಇವೆರಡೂ ಯುಗಗಳಿಗಿಂತ ಆಧುನಿಕ ಯುಗ ತುಂಬ ಭಿನ್ನವಾಗಿ ಕಾಣಿಸುತ್ತದೆ. ಈ ಎಲ್ಲ ಕಾಲಘಟ್ಟಗಳಲ್ಲಿಯೂ "ವಚನ" ಸಾಹಿತ್ಯರೂಪವಾಗಿ ಬಳಕೆಯಾಗಿದೆ.

ಹನ್ನೆರಡನೇ ಶತಮಾನದ ವಚನ ಚಳುವಳಿ, ಹದಿನೈದು-ಹದಿನಾರನೇ ಶತಮಾನದ ಹೊತ್ತಿಗೆ ತಣ್ಣಗಾಯಿತು. ಈ ಕಾಲಘಟ್ಟ ಧಾರ್ಮಿಕ ಪುನರುತ್ಥಾನದ ಕಾಲ. ಹೀಗಾಗಿ ಇಲ್ಲಿ ವಚನ ಕ್ರಾಂತಿ, ವಚನ ಚಳುವಳಿ, ವಚನ ವಿಜ್ಞಾನ, ಮಹಿಳಾ ಸಮಾನತೆ, ದಲಿತ ಚಿಂತನೆ ಕಾಣಸಿಗುವುದಿಲ್ಲ. ಈ ಕಾಲಘಟ್ಟದಲ್ಲಿ ಸಾಮಾಜಿಕ-ಹೋರಾಟದ ಬದಲು ಆಧ್ಯಾತ್ಮಿಕ ಸಾಧನೆ ಮುಖ್ಯವಾಯಿತು. ಹೀಗಾಗಿ ಬಸವೋತ್ತರ ಯುಗದ ವಚನಕಾರರ ಆಶಯಗಳು ಬೇರೆ ರೀತಿಯಲ್ಲಿಯೇ ವಿಕಾಸ ಹೊಂದಿದವು.

ಆಧುನಿಕ ಯುಗದಲ್ಲಿ "ವಚನ"ವೆಂಬುದು ಕೇವಲ ಒಂದು ಸಾಹಿತ್ಯ ರೂಪವಾಗಿ ಮಾತ್ರ ಉಳಿದುಕೊಂಡಿತು. ಭಾವಗೀತೆ, ಸುನೀತದ ಹಾಗೆ 'ವಚನ' ಬಳಕೆಯಾಯಿತು. ಬಸವಯುಗದ ಕ್ರಾಂತಿಯಾಗಲಿ, ಬಸವೋತ್ತರ ಯುಗದ ಆಧ್ಯಾತ್ಮಿಕ ಚಿಂತನೆಯಾಗಲಿ ಇಲ್ಲಿ ಮುಖ್ಯವಾಗದೆ, ಸಾಮಾಜಿಕ ವಿಡಂಬನೆ-ಆದರ್ಶ ಬದುಕು ಮುಖ್ಯವಾದುದನ್ನು ಕಾಣಬಹುದಾಗಿದೆ. ಇದು ಯುಗಧರ್ಮ ಹಾಗೂ ಸಾಹಿತ್ಯ ಧರ್ಮಗಳಲ್ಲಿರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತದೆ.

ಆಧುನಿಕ ಸಂದರ್ಭದಲ್ಲಿ ಎಸ್.ವಿ.ರಂಗಣ್ಣನವರು ವಚನ ರಚನೆಗೆ ಮೊದಲು ಪ್ರಯತ್ನಿಸಿದವರಾಗಿದ್ದಾರೆ. ಇವರನ್ನು ಆಧುನಿಕ ವಚನ ಸಾಹಿತ್ಯದ ಆದ್ಯ ಪ್ರವರ್ತಕರೆಂದು ವಿಮರ್ಶಕರು ಗುರುತಿಸಿದ್ದಾರೆ. ಆದರೆ



ದೇವದುರ್ಗದ ಆದಿ ಅಮಾತೆಪ್ಪನೇ ಆಧುನಿಕ ವಚನ ಸಾಹಿತ್ಯದ ಪಿತಾಮಹನೆಂದು ನಾವು ಇತ್ತೀಚೆಗೆ ಸಂಶೋಧನೆ ಮಾಡಿದ್ದೇವೆ. ಇವರೊಂದಿಗೆ ಹರ್ಡೇಕರ ಮಂಜಪ್ಪ, ಜಚನಿ, ಎಸ್.ವಿ. ಪರಮೇಶ್ವರಭಟ್ಟ, ಜೋಳದರಾಶಿ ದೊಡ್ಡನಗೌಡ, ಜೀರಿಗಿಕಟ್ಟಿ ಬಸವಪ್ಪ, ಮಹಾದೇವ ಬಣಕಾರ, ಮೂಜಗಂ ಮೊದಲಾದವರು ವಚನ ರಚನೆ ಮಾಡಿದವರಾಗಿದ್ದಾರೆ. ಈ ವಚನಕಾರರಲ್ಲಿ ಸಿದ್ಧಯ್ಯ ಪುರಾಣಿಕರ ಹೆಸರು ತುಂಬ ವಿಸಿಷ್ಟವಾದುದು. ಸಿದ್ಧಯ್ಯ ಪುರಾಣಿಕರು ಕಾವ್ಯ-ಕಥೆ-ಕಾದಂಬರಿ-ನಾಟಕಗಳನ್ನು ರಚಿಸಿದ್ದರೂ, ವಿಮರ್ಶಕರು ಅವರನ್ನು ಗುರುತಿಸಿರುವುದು ಪ್ರಮುಖ ವಚನಕಾರರನ್ನಾಗಿ ಎಂಬ ವಿಷಯ ಬಹಳ ಮುಖ್ಯವಾದುದಾಗಿದೆ.

ವಚನೋದ್ಯಾನ, ವಚನ ನಂದನ, ವಚನ ರಾಮ ಹೀಗೆ ಮೂರು ಬೃಹತ್ ವಚನ ಸಂಪುಟಗಳನ್ನು ಪ್ರಕಟಿಸಿರುವ ಕಾವ್ಯಾನಂದರ ವಿಶಿಷ್ಟ ಕೊಡುಗೆ ಇರುವುದೇ ವಚನಗಳಲ್ಲಿ. ಇವರು ಸುಮಾರು ೧೫೦೦ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ. ಇವರದು ಸಮನ್ವಯದೃಷ್ಟಿ. ಪರಂಪರೆಯನ್ನು ಸಂಪೂರ್ಣವಾಗಿ ವಿರೋಧಿಸದೆ, ಆಧುನಿಕತೆಯನ್ನು ಯಥಾವತ್ತಾಗಿ ಸ್ವೀಕರಿಸದೆ ಎರಡರಲ್ಲಿರುವ ಉತ್ತಮಾಂಶಗಳನ್ನು ಹೀರಿಕೊಂಡು ಬದುಕುವ ಬರೆಯುವ ಆಶಯ ಕಾವ್ಯಾನಂದರದಾಗಿದೆ.

ಪುರಾಣಿಕರ ವಚನಗಳಲ್ಲಿ ವಸ್ತು ವೈವಿಧ್ಯತೆಯಿದೆ. ಲೌಕಿಕ-ಪಾರಮಾರ್ಥಿಕ, ಇಹ-ಪರ ಎರಡೂ ವಿಷಯಗಳು ಸಮನ್ವಯಗೊಂಡಿವೆ. ಅವರ ವಚನಗಳನ್ನು ವಿಷಯಾನುಕ್ರಮಣಿಕೆಯಲ್ಲಿ ಜೋಡಿಸುವುದಾದರೆ ಹೀಗೆ ಜೋಡಿಸಬಹುದಾಗಿದೆ. ೧) ಜೀವ-ದೇವ ಸಂಬಂಧ ೨) ಪ್ರಕೃತಿ ೩) ಚಿಂತನ-ಮಂಥನ ೪) ಸಮಾಜಿಕ ಪ್ರಜ್ಞೆ ೫) ಸಂಪ್ರದಾಯ-ಮೂಢನಂಬಿಕೆ ೬) ಸತಿ-ಪತಿಭಾವ ೭)ಪ್ರೀತಿಯ ಅನಂತತೆ ೮) ಮಹಿಳೆ, ಈ ವಿಷಯಗಳಲ್ಲದೆ ಇನ್ನೂ ಅನೇಕ ವಿಷಯಗಳನ್ನು ಅವರ ವಚನಗಳು ವಸ್ತುವನ್ನಾಗಿಸಿಕೊಂಡಿವೆ.

■

# ಜೀವ-ದೇವ ಸಂಬಂಧ

ಜೀವ-ದೇವ ಸಂಬಂದ ಪರಿಕಲ್ಪನೆ ಕೇವಲ ಆಸ್ತಿಕರಲ್ಲಿ ಮಾತ್ರ ಸಾಧ್ಯ. ಪುರಾಣಿಕರು ಆಸ್ತಿಕರು. ಆದರೆ ಸಂಪ್ರದಾಯ ವಿರೋಧಿಗಳು. ಈ ವಿಷಯದಲ್ಲಿ ಪುರಾಣಿಕರ ಮೇಲೆ ಹನ್ನೆರಡನೇ ಶತಮಾನದ ಶರಣರ ಪ್ರಭಾವ ದಟ್ಟವಾಗಿದೆ. ಜೀವ-ದೇವ ಸಂಭಂಧದ ವಿಷಯ ಕುರಿತು ಮಾತನಾಡುವಾಗಲೆಲ್ಲ, ಆತ್ಮನಿವೇದನೆ ಪ್ರಮುಖ ಪಾತ್ರವಹಿಸುತ್ತದೆ. ಪುರಾಣಿಕರ ದೇವ ಎಲ್ಲಿಯೋ ಇರುವಂತವನಲ್ಲ, ಆತ ಅವರೊಳಗಡೆಯೇ ಇದ್ದಾನೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ತುಂಬ ಕುತೂಹಲಕಾರಿಯಾದ ಸಂಗತಿಗಳನ್ನವರು ತಿಳಿಸಿದ್ದಾರೆ.

**"ಶಬ್ದ ಹುಟ್ಟದ ಮುನ್ನಿನ ಅರ್ಥದಂತೆ**
**ವಾದ್ಯ ಹುಟ್ಟದ ಮುನ್ನಿನ ನಾದದಂತೆ**
**ಕುಂಚ ಹುಟ್ಟದ ಮುನ್ನಿನ ಚಿತ್ರದಂತೆ**
**ಉಳಿ ಹುಟ್ಟದ ಮುನ್ನಿನ ಪ್ರಾಣದಂತೆ ಇದ್ದೆಯಯ್ಯಾ!...."**

ಅವರ ವಚನವೊಂದರ ಈ ಸಾಲುಗಳಲ್ಲಿ ಬರುವ ಉಪಮೆಗಳು, ಒಂದರ ನಂತರ ಒಂದು ಸೇರಿಕೊಂಡು ಸರಮಾಲೆಯಂತೆ ಕಾಣಿಸುತ್ತವೆ. ವಚನದ ಪ್ರಾರಂಭದಲ್ಲಿಯೇ "ನಾನು ಹುಟ್ಟುವ ಮುನ್ನ ನೀನು ಹೇಗಿದ್ದೆಯಯ್ಯಾ?" ಎಂದು ದೇವರನ್ನೇ ಪ್ರಶ್ನಿಸುತ್ತಾರೆ. ಅದಕ್ಕೆ ದೇವರಿಂದ ಉತ್ತರ ದೊರೆಯದೇ ಹೋದಾಗ ತಾವೇ ಆ ಉತ್ತರವನ್ನು ಹುಡುಕಿಕೊಳ್ಳುತ್ತಾರೆ. ಶಬ್ದ-ಅರ್ಥ, ವಾದ್ಯ-ನಾದ, ಕುಂಚ-ಚಿತ್ರ ಇಂತಹ ಜೋಡಿ ಪದಗಳನ್ನು ಜೋಡಿಸುತ್ತ ಅದಕ್ಕೆ ಜೀವ ತುಂಬುತ್ತಾರೆ.



ಶಬ್ದ ಹುಟ್ಟಿದ ನಂತರವಲ್ಲವೆ ಅರ್ಥ ಹುಟ್ಟುವುದು! ವಾದ್ಯ ಹುಟ್ಟಿದ ನಂತರವಲ್ಲವೆ ನಾದ ಕೇಳಿಸುವುದು!, ಕುಂಚ ಹುಟ್ಟಿದ ನಂತರವಲ್ಲವೆ ಚಿತ್ರ ಕಾಣಿಸುವುದು!, ಹೀಗೆ ಈ ಉಪಮಾ ಮಾಲೆಯನ್ನು ಬೆಳೆಸುತ್ತಾರೆ; ವಚನದ ಕೊನೆಯಲ್ಲಿ ಕೇಳುವ ಪ್ರಶ್ನೆ ಬಹಳ ಮುಖ್ಯವಾದುದಾಗಿದೆ.

**"ನಾನು ಹುಟ್ಟಿದ ಮೇಲೆ ತಾನೆ**
**ಅರ್ಥಕ್ಕೆ ಶಬ್ದ, ನಾದಕ್ಕೆ ವಾದ್ಯ**
**ಚಿತ್ರಕ್ಕೆ ಕುಂಚ, ಶಿಲ್ಪಕ್ಕೆ ಉಳಿ**
**ನಿನಗೆ ಭಕ್ತ ದೊರೆತುದು?"**

"ತಮ್ಮ ಹುಟ್ಟಿಗೆ ದೇವನೇ ಕಾರಣ"ವೆಂದು ಉಳಿದ ಆಸ್ತಿಕರೆಲ್ಲ ಭಾವಿಸಿದರೆ; "ನಾನು ಹುಟ್ಟಿದ ನಂತರವೇ ದೇವನ ಅಸ್ತಿತ್ವ"ವೆಂದು ಪುರಾಣಿಕರು ಹೇಳುತ್ತಾರೆ. ಉಳಿದ ಆಸ್ತಿಕರಿಗೂ ಪುರಾಣಿಕರಿಗೂ ಇರುವ ವ್ಯತ್ಯಾಸ ಇಲ್ಲಿಯೇ; 'ಶಿವನಿಗಿಂತ ಶಿವಶರಣ ಮುಖ್ಯ' ಎನ್ನುವ ಶರಣರ ಆಶಯ ಇಲ್ಲಿ ವ್ಯಕ್ತವಾಗಿದೆ. ಹಾಗೆ ನೋಡಿದರೆ ಇದು ನಾಸ್ತಿಕವಾದದ ಪ್ರಾರಂಭದ ಪರಿಕಲ್ಪನೆಯೇ ಆಗಿದೆ. 'ನಾನಿದ್ದರೆ ಜಗತ್ತು' ಎಂದು ನಾಸ್ತಿಕರು ಹೇಳುತ್ತಾರೆ. ಅದನ್ನೇ ಪುರಾಣಿಕರು ಉಪಮೆಗಳ ಮೂಲಕ ಇಲ್ಲಿ ಹೇಳಿದ್ದಾರೆ. ಅಂದರೆ ಪುರಾಣಿಕರು ಆಸ್ತಿಕನೆಂದು ಹೇಳಿಕೊಳ್ಳುತ್ತಲೇ ನಾಸ್ತಿಕ ವಿಚಾರಗಳನ್ನು ಪ್ರತಿಪಾದಿಸುತ್ತಾರೆ. ಇವರ ವಚನದ ಅರ್ಥವ್ಯಾಪ್ತಿ ಆಸ್ತಿಕ-ನಾಸ್ತಿಕ ಚರ್ಚೆಯನ್ನು ದಾಟಿ ಮುಂದೆ ಹೋಗುತ್ತದೆ. ಮನುಷ್ಯ ಹುಟ್ಟಿದ ಮೇಲೆ ತಾನೆ ಅರ್ಥಕ್ಕೆ-ಶಬ್ದ, ನಾದಕ್ಕೆ-ವಾದ್ಯ, ಚಿತ್ರಕ್ಕೆ-ಕುಂಚ, ಶಿಲ್ಪಕ್ಕೆ-ಉಳಿ ದೊರೆತದ್ದು ಎಂದು ಹೇಳುವಲ್ಲಿ ವೈಜ್ಞಾನಿಕ ಚಿಂತನೆಯಿದೆ. ಮನುಷ್ಯ ಸಾಮರ್ಥ್ಯವನ್ನು ಅಲ್ಲಗಳೆಯುವ, ಕಾಣದ ದೇವನನ್ನು ವೈಭವೀಕರಿಸುವ ಆಸ್ತಿಕರೇ ತುಂಬಿರುವ ಸಮಾಜವ್ಯವಸ್ಥೆಯಲ್ಲಿ, ಪುರಾಣಿಕರು ದೇವನ ಪರಿಕಲ್ಪನೆಯನ್ನು ನಿರಾಕರಿಸದೆ, ಮನುಷ್ಯನ ಮಹತ್ವವನ್ನು ಕಟ್ಟಿಕೊಡುತ್ತಾರೆ.

ಶರಣರು ದೇವನನ್ನು ಪ್ರಸ್ತಾಪಿಸಿದ ಉದ್ದೇಶವೂ ಕೂಡ ಇದೇ ಆಗಿತ್ತು. ಅವರು ಪರವನ್ನು ತಿರಸ್ಕರಿಸದೆಯೇ ಇಹವನ್ನು ಎತ್ತಿಹಿಡಿದರು. ಹರನನ್ನು

ಬಿಟ್ಟು ಕೊಡದೆಯೇ ನರನ ಸಾಧ್ಯತೆಗಳನ್ನು ಕಟ್ಟಿಕೊಟ್ಟರು. ಪಾರಮಾರ್ಥವನ್ನು ಅಲ್ಲಗಳೆಯದೆಯೇ ಲೌಕಿಕವನ್ನು ಬೆಳಗಿದರು. ಇಹದ ಮೂಲಕ ಪರವನ್ನು, ನರನ ಮೂಲಕ–ಹರನನ್ನು, ಲೌಕಿಕದ ಮೂಲಕ ಅಲೌಕಿಕವನ್ನು ಕಂಡುಕೊಂಡರು. ಶರಣರ ಇದೇ ಆಶಯ ಪುರಾಣಿಕರ ಈ ವಚನದಲ್ಲಿ ಹೊಸ ರೀತಿಯಿಂದ ಅಭಿವ್ಯಕ್ತಗೊಂಡಿದೆ. ಇಲ್ಲಿ ನಾನು ಮತ್ತು ಅವನ ಸಂಬಂಧದಲ್ಲಿ, ನನ್ನ ಮೂಲಕ ಅವನು ಎನ್ನುವ ಪರಿಕಲ್ಪನೆ, ಮಾನವ ಸಾಧ್ಯತೆಗಳಿಗೆ ನೀಡಿದ ಗೌರವವಾಗಿದೆ. ಈ ಕಾರಣದಿಂದಲೇ ಪುರಾಣಿಕರು ಮಹತ್ವದ ವಚನಕಾರರಾಗಿ ಕಾಣಿಸುತ್ತಾರೆ.

**"ಹೂವಿಗೆ ಬಣ್ಣವಲ್ಲದೆ, ಕಂಪಿಗೆ ಬಣ್ಣವಿಹುದೇನಯ್ಯ?**
**ಹರಳಿಗೆ ತಿಣ್ಣವಲ್ಲದೆ, ಕಿರಣಕ್ಕೆ ತಿಣ್ಣವುಂಟೇನಯ್ಯ?**
**ಕುರುಹಿಗೆ ರೂಪವಲ್ಲದೆ, ಅರುಹಿಗೆ ರೂಪವಿರ್ಪುದೇನಯ್ಯ?**
**ವಾದ್ಯಕ್ಕೆ ಆಕಾರವಲ್ಲದೆ, ನಾದಕ್ಕೆ ಆಕಾರವಿದೆಯೇನಯ್ಯ?**
**ನನಗೆ ನಾಮರೂಪವಲ್ಲದೆ, ನಿನಗೆ ನಾಮ ರೂಪಗಳೆಲ್ಲಿಯವಯ್ಯ?"**

ಈ ವಚನದಲ್ಲಿಯೂ ಕೂಡ ಅದೇ ಭಾವ ವ್ಯಕ್ತವಾಗಿದೆ. ನಾನಿಲ್ಲದೆ ನೀನಿಲ್ಲವೆನ್ನುವ ಆಶಯ ಅತ್ಯಂತ ವೈಜ್ಞಾನಿಕವಾದುದಾಗಿದೆ. ಬಣ್ಣ, ರೂಪ, ರಸ, ಗಂಧಗಳು ಮೂರ್ತರೂಪದ ಆಕೃತಿಗಳು. ಕಂಪು, ಚೆಲುವು, ರುಚಿ, ಪರಿಮಳ ಇವು ಅಮೂರ್ತ ರೂಪದ ಪರಿಕಲ್ಪನೆಗಳು. ಮೂರ್ತದ ಮೂಲಕವೇ ಅಮೂರ್ತವನ್ನು ಕಾಣುವ ಜೀವನ ಮೂಲಕವೇ ದೇವನನ್ನು ಹುಡುಕುವ ಈ ಪರಿ ಅತ್ಯಂತ ವಸ್ತುನಿಷ್ಠವಾದುದಾಗಿದೆ. ಮನೋವಿಜ್ಞಾನದ ನೆಲೆಯಲ್ಲಿ ದೇವನನ್ನು ಹುಡುಕುವ ಶರಣರ ಮಾದರಿಗಳೇ, ಪುರಾಣಿಕರ ವಚನಗಳಲ್ಲಿ ಸುಂದರವಾಗಿ ಅಭಿವ್ಯಕ್ತವಾಗಿವೆ.

ಜೀವ–ದೇವ, ಆತ್ಮ–ಪರಮಾತ್ಮ ಸಂಬಂಧದ ಬಗೆಗೆ ಪುರಾಣಿಕರು ಆಲೋಚಿಸಿರುವ ರೀತಿ ಕುತೂಹಲಕಾರಿಯಾಗಿದೆ. ಅದು ಒಂದು ಒಣ ತರ್ಕವಾಗಿ ಕಾಣಿಸುವುದಿಲ್ಲ ಅಥವಾ ಒಂದು ಸಿದ್ಧಾಂತವಾಗಿ ಭಾರವೆನಿಸುವುದಿಲ್ಲ, ಅದು ನಮ್ಮ ಅನುಭವದ ಭಾಗವಾಗಿ ಬಿಡುತ್ತದೆ,



ಅದನ್ನು ನಾವು ಒಪ್ಪದಿದ್ದರೂ ಆ ನಿಟ್ಟಿನಲ್ಲಿ ಧ್ಯಾನಿಸಲು ಹಚ್ಚಿಬಿಡುತ್ತದೆ. ಇಂತಹ ಕಡೆಗಳೆಲ್ಲಲ್ಲ ಪುರಾಣಿಕರು ನಮಗೆ ಕಾವ್ಯಾನಂದರಾಗಿ–ದಾರ್ಶನಿಕರಾಗಿ–ಸ್ನೇಹಜೀವಿಯಾಗಿ ಕಾಣಿಸಿಕೊಳ್ಳುತ್ತಾರೆ. ಜೀವ–ದೇವದ ಪರಿಕಲ್ಪನೆ ಅವರಲ್ಲಿ ದ್ವೈತವಾಗಿ ಬೆಳೆಯುವುದಿಲ್ಲ; ಅದ್ವೈತಕ್ಕೆ ಮಾತ್ರ ಸೀಮಿತವಾಗುವುದಿಲ್ಲ, ಇಂತಹ ಎಲ್ಲ ಎಲ್ಲೆಗಳನ್ನು ದಾಟಿ ಮುಂದೆ ಸಾಗುತ್ತದೆ, ಮತ್ತೆ ಮತ್ತೆ ಆಲೋಚನೆಗೆ ತೊಡಗಿಸುತ್ತದೆ. ಅಂತಹ ಪರಿಣಾಮಕಾರಿ ಗುಣ ಅವರ ವಚನಗಳಲ್ಲಿದೆ.

**"ಬಣ್ಣದ ಹೂವಿನ ಮೇಲೆ ಬಣ್ಣದ ಚಿಟ್ಟೆ ಕುಳಿತಾಗ**
**ಹೂವಾವುದೋ, ಚಿಟ್ಟೆಯಾವುದೋ!**
**ಅಸುಗೆಯ ಎಲೆಗಳಲ್ಲಿ ಹಸಿರು ಗಿಳಿ ಕುಳಿತಾಗ**
**ಎಲೆಯಾವುದೋ, ಗಿಳಿ ಯಾವುದೋ!**
**ಸ್ವತಂತ್ರಧೀರ ಸಿದ್ಧೇಶ್ವರಾ, ನನ್ನ ಮನದ ವನದಲ್ಲಿ**
**ನೀನು ಕುಳಿತಾಗ ನೀನಾರೋ, ನಾನಾರೋ!"**

ಹೀಗೆ ಎರಡಿದ್ದದ್ದು ಒಂದಾಗುವ, ಒಂದಾದದ್ದು ಸ್ಥಗಿತಗೊಳ್ಳದೆ ಚಲನಶೀಲವಾಗುವ ನಿರಂತರವಾದ ಅನನ್ಯತೆಯನ್ನು ಅವರ ರಚನೆಗಳಲ್ಲಿ ಕಾಣಬಹುದಾಗಿದೆ. ಅವರು ಹೇಳುವ ಉಪಮೆಗಳು, ತಂದುನಿಲ್ಲಿಸುವ ಪ್ರತಿಮೆಗಳು, ಕೊಡುವ ದೃಷ್ಟಾಂತಗಳು ವಿನೂತನವಾಗಿವೆ. ಈ ಎಲ್ಲದರ ಜೋಡಣೆಯಲ್ಲಿ ಬರೀ ತರ್ಕವಿಲ್ಲ, ಜೀವನಾನುಭವದ ವಿನಮ್ರತೆಯಿದೆ. ಎಲೆ–ಅಡಕೆ–ಸುಣ್ಣ ಸೇರಿ ಬಾಯಿ ಕೆಂಪಾಗುವಂತೆ, ಪ್ರಣತಿ–ಎಣ್ಣೆ–ಬತ್ತಿ ಸೇರಿ ಬೆಳಕಾಗುವಂತೆ; ಅನೇಕವಾದದ್ದು–ಏಕವಾಗುವ; ಏಕವಿದ್ದುದ್ದು ಅನೇಕವಾಗಿ ಬೆಳೆದು ನಿಲ್ಲುವ ಸೃಜನಶೀಲತೆಯನ್ನು ಅವರ ವಚನಗಳಲ್ಲಿ ಕಾಣಬಹುದಾಗಿದೆ.

■

# ಪ್ರಕೃತಿ

ನವೋದಯ ಸಂದರ್ಭದಲ್ಲಿ ಬರವಣಿಗೆ ಪ್ರಾರಂಭಿಸಿದ ಸಿದ್ಧಯ್ಯ ಪುರಾಣಿಕರ ವಚನಗಳಲ್ಲಿ ಸಹಜವಾಗಿಯೇ ಪ್ರಕೃತಿಯ ಬಗೆಗೆ ಪ್ರಸ್ತಾಪವಿದೆ. ಶರಣರು ಸಕಲ ಜೀವಿಗಳಿಗೂ ಪ್ರಾಮುಖ್ಯತೆ ನೀಡಿದರು. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಮನುಷ್ಯ ಜೀವಕ್ಕೆ ಮಾತ್ರ ಪ್ರಾಧಾನ್ಯತೆಯಿದೆ. ಮನುಷ್ಯನ ಸಲುವಾಗಿ ಸಸ್ಯ-ಪಕ್ಷಿ-ಪ್ರಾಣಿ ಸಂಕುಲಗಳು ನಾಶವಾಗುತ್ತಲಿವೆ. ಆದರೆ ಶರಣ ಸಂಸ್ಕೃತಿಯಲ್ಲಿ ಮನುಷ್ಯನಷ್ಟೇ ಇತರ ಜೀವಿಗಳಿಗೂ ಪ್ರಾಧಾನ್ಯತೆ ಇದೆ. ಹೀಗಾಗಿ ಪಾಶ್ಚಾತ್ಯರದು ಮನುಷ್ಯ ಕೇಂದ್ರಿತ, ಅಹಂ ಪ್ರಧಾನವಿರುವ ಸಂಸ್ಕೃತಿಯಾದರೆ, ಶರಣರದು ಜೀವ ಕೇಂದ್ರಿತ, ಅಂತಃಕರಣದ ಸಂಸ್ಕೃತಿಯಾಗಿದೆ. ಕಾವ್ಯಾನಂದರು ಶರಣ ಸಂಸ್ಕೃತಿಯ ಪ್ರಭಾವಕ್ಕೊಳಗಾದವರು. ಹೀಗಾಗಿ ಅವರಲ್ಲಿ ಪ್ರಕೃತಿಯನ್ನು ಕುರಿತು, ನಿಸರ್ಗವನ್ನು ಕುರಿತು, ಪಶು-ಪಕ್ಷಿ-ಪ್ರಾಣಿ ಸಂಕುಲವನ್ನು ಕುರಿತು ಆಸಕ್ತಿಯಿದೆ. ಅವರ ಅನೇಕ ವಚನಗಳಲ್ಲಿ ಈ ಪ್ರಕೃತಿಪ್ರೇಮ, ಪರಿಸರ ಕಾಳಜಿ ಪ್ರಕಟವಾಗಿದೆ.

"ಹೂವು ತಮ್ಮೆದೆಯ ತೆರೆದರೆ
ಅಂದ, ಸುಗಂಧ, ಮಕರಂದಗಳ ಸುಗ್ಗಿ,
ಸಿಂಪುಗಳು ತಮ್ಮೆದೆಯ ತೆರೆದರೆ
ಮುತ್ತುಗಳು ಬರುವವು ನುಗ್ಗಿ,
ಹನುಮ ತನ್ನೆದೆಯ ತೆರೆದರೆ
ಸೀತಾ-ರಾಮರ ಚಿತ್ರ
ಇರುಳು ತನ್ನೆದೆಯ ತೆರೆದರೆ
ಕೋಟಿ ಕೋಟಿ ನಕ್ಷತ್ರ!......"



ಹೀಗೆ ಈ ವಚನ ದ್ವಿತೀಯ ಸಾಲಿನ ಅಂತ್ಯಾಕ್ಷರ ಪ್ರಾಸದ ಮುಲಕ ಬೆಳೆದುಕೊಂಡು ಹೋಗುತ್ತದೆ. ಹೂವಿನಿಂದ ಸುಗಂಧ, ಸಿಂಪುಗಳಿಂದ ಮುತ್ತುಗಳು, ಹನುಮನಿಂದ ಸೀತಾ-ರಾಮರು, ಇರುಳಿನಿಂದ ನಕ್ಷತ್ರಗಳು ಬಿಚ್ಚಿಕೊಳ್ಳುವ ಬಗೆಯನ್ನು ಕಾವ್ಯಾತ್ಮಕವಾಗಿ ಕಾವ್ಯಾನಂದರು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಹನುಮನ ಮೂಲಕ ಸೀತಾ- ರಾಮರನ್ನು ಪರಿಚಯಿಸುವ, ಇರುಳಿನ ಮೂಲಕ-ನಕ್ಷತ್ರಗಳನ್ನು ತೋರಿಸುವ ಕಾವ್ಯಾನಂದರ ಕಾವ್ಯಧೋರಣೆ ಜನಪರವಾಗಿದೆ, ಜೀವಪರವಾಗಿದೆ. ಇಂತಹ ಅನೇಕ ಸೂಕ್ಷ್ಮಗಳನ್ನು ಅವರ ವಚನಗಳಲ್ಲಿ ಕಾಣಬಹುದಾಗಿದೆ.

"ಗಿಡಗಂಟೆಗಳ ಕೊರಳೊಳಗಿಂದ ಹೊರಟಿತು ಹಕ್ಕಿಗಳ ಹಾಡು" ಎಂದು ಬೇಂದ್ರೆಯವರು ಗಿಡಗಂಟೆಗಳಿಗೆ ವ್ಯಕ್ತಿಯ ರೂಪಧಾರಣೆ ಮಾಡಿದರೆ, ಪುರಾಣಿಕರು ಬಳ್ಳಿಯ ಬಾಣಂತಿತನದ ಬಗೆಗೆ ತಮ್ಮ ವಚನವೊಂದರಲ್ಲಿ ಪ್ರಸ್ತಾಪಿಸಿದ್ದಾರೆ. "ಹೂಹೆತ್ತ ಬಳ್ಳಿಯ ಬಾಣಂತಿತನ ಮಾಡುವವರಾರಯ್ಯ!" ಎಂದು ಪ್ರಶ್ನಿಸಿದ್ದಾರೆ. ಕೊಯ್ಯುವರೆಂದು ಭತ್ತ ತೆನೆ ಬಿಡುವುದನ್ನು ನಿಲ್ಲಿಸುವುದಿಲ್ಲ, ಬಾಳೆ ಗೊನೆಬಿಡುವದನ್ನು ನಿಲ್ಲಿಸುವುದಿಲ್ಲ, ಬಳ್ಳಿ ಹೂಬಿಡುವುದನ್ನು ನಿಲ್ಲಿಸುವುದಿಲ್ಲವೆಂದು ತಿಳಿಸುತ್ತಾರೆ. ಅದೇ ರೀತಿ ಮನುಷ್ಯರು ಕಲ್ಲಿನಿಂದ ಹೊಡೆದರೂ, ಮರ ಫಲ ಬಿಡುವುದನ್ನು, ಜೇನುಹುಳ ಗೂಡಿಡುವುದನ್ನು, ಹಕ್ಕಿ ಬಚ್ಚು ಕಟ್ಟುವುದನ್ನು ನಿಲ್ಲಿಸುವದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

ಕಾವ್ಯಾನಂದರು, ನಿಸರ್ಗಮಾತೆಯನ್ನು ಕುರಿತು, ಅಕೆಯ ಅಂತಃಕರಣವನ್ನು ಕುರಿತು ತಮ್ಮ ಅನೇಕ ವಚನಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮನುಷ್ಯ ಕೆಡಿಸುತ್ತ ಹೋದುದನ್ನು ನಿಸರ್ಗ ಮಾತೆ ಸರಿಪಡಿಸುತ್ತ ಹೋಗುತ್ತಾಳೆ. ಆತ ಕಡಿಯುತ್ತ ಹೋದರೆ ಈಕೆ ಕೊನರುತ್ತಾ ನಿಲ್ಲುತ್ತಾಳೆ, ಆತ ಸುಟ್ಟು ಹಾಳುಮಾಡಿದರೆ ಈಕೆ ಹುಟ್ಟಿಸಿ ಸಲಹುತ್ತಾಳೆ; ಆತ ತುಳಿಯುತ್ತ ಹೋದಲ್ಲೆಲ್ಲ ಈಕೆ ಮೊಳೆಯುತ್ತ ನಳನಳಿಸುತ್ತಾಳೆ. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಹೇಗೆ ಪ್ರಕೃತಿಯನ್ನು ನಾಶಮಾಡುತ್ತಾ ನಡೆದಿದ್ದಾನೆಂದು ಅನೇಕ

ಉಪಮೆಗಳ ಮೂಲಕ ತಿಳಿಸಿದ್ದಾರೆ. ಪ್ರಕೃತಿ ಕುರಿತ ಪುರಾಣಿಕರ ಧೋರಣೆಗಳು ಅಂದಿಗಿಂತಲೂ ಇಂದಿಗೆ ಹೆಚ್ಚು ಪ್ರಸ್ತುತವಾಗಿವೆ.

ಇಂದು ಮನುಷ್ಯ ಹಸಿರು ಕಾಡು ಕಡಿದು, ಕಾಂಕ್ರೀಟು ಕಾಡು ನಿರ್ಮಿಸುತ್ತಿದ್ದಾನೆ. ಇದನ್ನು ಪುರಾಣಿಕರು ಬಹಳ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಮನುಷ್ಯ ನಿಸರ್ಗವನ್ನು ಕೆಡಿಸುತ್ತ ಹೋದಂತೆ ಅದು ಹೇಗೆ ಮತ್ತೆ ಮತ್ತೆ ಬೆಳೆದು ನಿಲ್ಲುತ್ತದೆಂಬುದನ್ನು ತಿಳಿಸಿದ್ದಾರೆ

**"ಎಲೆಯುದುರಿ ಬರಿ ಮೈಯಾಗಿದ್ದರೂ**
**ಮತ್ತೆ ಚಿಗುರುವ ವಿಶ್ವಾಸ ಬೋಳು ಮರಗಳಿಗೆ**
**ಬಿಸಿಲಿನ ಬೇಗೆಯಿಂದ ಬತ್ತಿ ಹೋಗಿದ್ದರೂ**
**ಮತ್ತೆ ತುಂಬಿ ಹರಿವಾಸೆ ತೊರೆಗಳಿಗೆ**
**ರೆಕ್ಕೆಗಳು ಉದುರುತ್ತಿದ್ದರೂ**
**ಮತ್ತೆ ಪಕ್ಕ ಪಡೆವ ನಂಬಿಕೆ ಪಕ್ಷಿಗಳಿಗೆ...."**

ಪುರಾಣಿಕರ ಇಂತಹ ರಚನೆಗಳು ಬದುಕಿನಲ್ಲಿ ಮತ್ತೆ ಭರವಸೆಯನ್ನು ಹುಟ್ಟಿಸುತ್ತವೆ. ನಿಸರ್ಗದಿಂದ ಕಲಿಯುವುದು ಬಹಳಷ್ಟಿದೆಯೆಂದು ಅವರು ಹೇಳಿದ್ದಾರೆ. ಹುಲ್ಲು ಇಬ್ಬನಿಯನ್ನು ಇಬ್ಬನಿ ಹೂಬಿಸಿಲನ್ನು ಮುಡಿದುಕೊಂಡ ಬಗೆಯನ್ನು ಸುಂದರವಾಗಿ ವಿವರಿಸಿದ್ದಾರೆ. ತೆರೆ-ನೊರೆಯನ್ನು, ಹೂವು-ಚಿಟ್ಟೆಯನ್ನು, ಬೆಟ್ಟ-ಮೋಡವನ್ನು, ಮೋಡ-ಮಿಂಚನ್ನು ಮುಡಿದುಕೊಂಡು ಕಂಗೊಳಿಸುತ್ತವೆಂದು ವರ್ಣಿಸಿದ್ದಾರೆ.

ತೆಂಗಿನಲ್ಲಿ ತೆಪ್ಪಗೆ ಕೊಬ್ಬರಿ ಮೂಡಿ ಬೆಳೆದಂತೆ, ಹಲಸಿನಲ್ಲಿ ಸದ್ದಿಲ್ಲದೆ ತೊಳೆಗಳು ತುಂಬಿಕೊಂಡಂತೆ, ಹೂವಿನಲ್ಲಿ ಗದ್ದಲವಿಲ್ಲದೆ ಮಧು ಮೈದಾಳಿದಂತೆ, ನನ್ನ ಕಣಕಣದಲ್ಲಿ ತುಂಬಿರುವ ನೀನೇಕೆ ಬೆಳಕಾಗಿ ತುಳುಕದಿಹೆಯಯ್ಯಾ? ಎಂದು ಸ್ವತಂತ್ರಧೀರ ಸಿದ್ಧೇಶ್ವರನಲ್ಲಿ ಕೇಳಿಕೊಂಡಿದ್ದಾರೆ.

**"ಕೆಳಗೆ ಬೇರುಗಳು ಅನೇಕ**
**ಮೇಲೆ ಶಾಖೆಗಳು ಅನೇಕ**



**ಮಧ್ಯದಲ್ಲಿ ಬೊಡ್ಡೆ ಒಂದೇ ಅಯ್ಯ ಮರಕ್ಕೆ**
**ಬದುಕಿನ ಬೇರುಗಳು ಅನೇಕ**
**ಬದುಕುವವರ ಕಾರುಬಾರುಗಳು ಅನೇಕ**
**ಬದುಕಿನ ಹೂರಣ ಒಂದೇ ಅಯ್ಯ, ಒಟ್ಟು ನೋಟಕ್ಕೆ...."**

ಈ ವಚನದಲ್ಲಿ ಆನ್ವಯಿಕ ಸಸ್ಯಜ್ಞಾನವಿದೆ. ಮರಗಳ ಕೆಳಗೆ ಅನೇಕ ಬೇರುಗಳಿರುತ್ತವೆ, ಅದರ ಮೇಲೆ ಶಾಖೆಗಳನೇಕ ಇರುತ್ತವೆ. ಆದರೆ ನಡುವೆ ಇರುವ ಬೊಡ್ಡೆ ಮಾತ್ರ ಒಂದೇ ಇರುತ್ತದೆ. ಅದೇ ರೀತಿ ಬದುಕಿನ ಬೇರುಗಳನೇಕವಾದರೂ ಬದುಕಿನ ಹೂರಣ ಒಂದೇಯಾಗಿರುತ್ತದೆಂದು ತಿಳಿಸಿಕೊಟ್ಟಿದ್ದಾರೆ. ಏಕತೆಯಲ್ಲಿ ಅನೇಕತೆ ಮತ್ತೆ ಅನೇಕತೆ ಏಕವಾಗುವ ಬಗೆಯನ್ನು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ.

ಹಸಿನೆಲಕ್ಕೆ ಹಸಿರಾಗುವ ಕನಸು, ಹಸುರಾದರೆ ಸಸಿಯಾಗುವ ಕನಸು, ಸಸಿಯಾದರೆ ಗಿಡವಾಗುವ ಕನಸು, ಗಿಡವಾದರೆ ಕುಸುಮಿಸುವ ಕನಸು, ಫಲಿಸಿದ ಮೇಲೂ ಬೀಜ ಭೂಮಿ ಸೇರಿ ಮತ್ತೆ ಮೊಳೆವ ಕನಸು-ಇಂತಹ ಕನಸುಗಳನ್ನು ಕಟ್ಟಿಕೊಂಡ ನಿಸರ್ಗ ನಮಗೆ ಮಾದರಿಯಾಗಬೇಕೆಂದು ಕಾವ್ಯಾನಂದರು ಕಳಕಳಿ ವ್ಯಕ್ತಪಡಿಸಿದ್ದಾರೆ.

■

# ಚಿಂತನ-ಮಂಥನ

ಪುರಾಣಿಕರ ವಚನಗಳಲ್ಲಿ ಚಿಂತನೆಗೆ ತೊಡಗಿಸುವ ಅನೇಕ-ವಿಷಯಗಳು ಪ್ರಸ್ತಾಪವಾಗಿವೆ. ಆದರೆ ಈ ಚಿಂತನೆಗಳು ಯಾವುದೋ ಒಂದು ಪ್ರಗತಿಪರ ವಾದದ ಮಂಡನೆಯಾಗಿ ಅಭಿವ್ಯಕ್ತಗೊಳ್ಳದೆ, ಸಹಜವಾಗಿ ಮೂಡಿಬಂದವುಗಳಾಗಿವೆ. ಹೀಗಾಗಿ ಇಲ್ಲಿ ಹೊಸ ಸಿದ್ಧಾಂತದ, ಹೊಸ ಚಿಂತನೆಯ ಒಳನೋಟಗಳಿರದೆ, ಸಾಮಾನ್ಯ ಮನುಷ್ಯರ ಚಿಂತನೆಯ ಫಲಗಳು ವಚನ ರೂಪದಲ್ಲಿ ಪ್ರಕಟವಾಗಿವೆ. ಕವಿ ಆಧ್ಯಾತ್ಮದತ್ತ ಆಸಕ್ತಿಯುಳ್ಳವರಾದುದರಿಂದ ಆ ಕ್ಷೇತ್ರದತ್ತ ಆಲೋಚನೆಗಳು ಗಟ್ಟಿಗೊಂಡಿವೆ.

ಆಧುನಿಕತೆ ಬಂದಂತೆಲ್ಲ, ವೈಜ್ಞಾನಿಕ ಅವಿಷ್ಕಾರಗಳು ನಡೆದಂತೆಲ್ಲ ಸಮಾಜ ವ್ಯವಸ್ಥೆಯಲ್ಲಿ ಸಹಜವಾಗಿಯೇ ಬದಲಾವಣೆಯ ಗಾಳಿ ಬೀಸುತ್ತದೆ. ಹೀಗೆ ಬದಲಾವಣೆಗೊಳ್ಳುವ ಪ್ರಕ್ರಿಯೆಯಲ್ಲಿ ಒಂದರ ಸ್ಥಾನದಲ್ಲಿ ಮತ್ತೊಂದು ಆಕ್ರಮಿಸಿಕೊಳ್ಳುತ್ತದೆ. ಬದಲಾವನೆ ಅನಿವಾರ್ಯವೆಂದು ಒಪ್ಪಿಕೊಂಡರೂ, ಹೊಸದನ್ನು ಅಪ್ಪಿಕೊಂಡರೂ ಕಳೆದು ಹೋಗುತ್ತಿರುವ ಹಳೆಯದರ ಬಗೆಗೆ ಹಳಹಳಿಯೆನಿಸುತ್ತದೆ ಅದನ್ನು ಕವಿ ತರ್ಕಬದ್ಧವಾಗಿ ಹೇಳಿದ್ದಾರೆ.

"ವಿದ್ಯೆ ಬಂತು, ವಿನಯ ಹೋಯ್ತು
ಬುದ್ಧಿ ಬಂತು, ಶ್ರದ್ಧೆ ಹೋಯ್ತು
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು
ವಿಜ್ಞಾನ ಬಂತು, ಸಮಾಧಾನ ಹೋಯ್ತು
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು
ಬೋಧನೆ ಬಂತು, ಸಾಧನೆ ಹೋಯ್ತು



ಮಾತು ಬಂತು, ಕೃತಿ ಹೋಯ್ತು
ಜಾತಿ ಬಂತು, ಪ್ರೀತಿ ಹೋಯ್ತು
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು
ಸಿದ್ಧಯ ಪುರಾಣಿಕ ಬಂದ
ಸ್ವತಂತ್ರಧೀರ ಸಿದ್ಧೇಶ್ವರ ಹೋದ !"

ತೀವ್ರ ಬದಲಾವಣೆಯಾಗುತ್ತಿರುವ ಜಾಗತೀಕರಣದ ಈ ಸಂದರ್ಭದಲ್ಲಿ ಈ ವಚನದ ಆಶಯ ಹೆಚ್ಚು ಪ್ರಸ್ತುತವೆನಿಸುತ್ತದೆ.

ವಿದ್ಯಾವಂತರಾಗುವುದು ಬುದ್ಧಿವಂತರಾಗುವುದು ವಿಜ್ಞಾನಿಗಳಾಗುವುದು ಒಳ್ಳೆಯ ಬೆಳವಣಿಗೆ. ಆದರೆ ವಿದ್ಯಾವಂತರಾದಾಕ್ಷಣ ವಿನಯವಂತಿಕೆಯನ್ನು ಕಳೆದುಕೊಳ್ಳುವುದು ತಪ್ಪು. ಇದರಿಂದ ಪಾಂಡಿತ್ಯದ ಅಹಂಭಾವ ಬೆಳೆಯುತ್ತದೆ. ಅದೇ ರೀತಿ ಬುದ್ಧಿವಂತರಾದ ತಕ್ಷಣ ಶ್ರದ್ಧೆ-ನಂಬಿಕೆಗಳನ್ನು ಬಿಟ್ಟುಬಿಡುವುದು ಸೂಕ್ತವಾದುದಲ್ಲ. ವಿಜ್ಞಾನಿಯಾದ ತಕ್ಷಣ ಯಂತ್ರ ಜೀವನ ಸಾಗಿಸಬೇಕಾಗಿಲ್ಲ. ನಮ್ಮ ಸಂಸ್ಕೃತಿಯಲ್ಲಿರುವ ಮೌಲ್ಯಗಳನ್ನು ಬಿಟ್ಟುಕೊಟ್ಟು, ಇನ್ನೊಂದನ್ನು ಪಡೆದುಕೊಳ್ಳುವದು ಸೂಕ್ತ ಮಾರ್ಗವಲ್ಲವೆಂದು ಕವಿ ಹೇಳಿದ್ದಾರೆ. ನಮ್ಮಲ್ಲಿರುವ ಒಳ್ಳೆಯ ಸಂಗತಿಗಳನ್ನುಳಿಸಿಕೊಂಡೇ ಹೊಸದನ್ನು ಬೆಳೆಸಿಕೊಳ್ಳುವಂತಾಗಬೇಕೆಂದು ಕಳಕಳಿ ವ್ಯಕ್ತಪಡಿಸಿದ್ದಾರೆ. ಇಲ್ಲಿ ವಚನಕಾರರ ಪ್ರಭಾವವನ್ನು ಕಾಣಬಹುದಾಗಿದೆ. "ಸಿದ್ದಯ್ಯ ಪುರಾಣಿಕ ಬಂದ, ಸ್ವತಂತ್ರಧೀರ ಸಿದ್ಧೇಶ್ವರ ಹೋದ" ಎನ್ನುವ ಸಾಲಿನ ಮೂಲಕ ವಚನ ಮುಕ್ತಾಯವಾಗುತ್ತದೆ. ಇಲ್ಲಿ ಸಿದ್ಧಯ್ಯ ಪುರಾಣಿಕ ವ್ಯಕ್ತಿಯಾಗಿ, ಸ್ವತಂತ್ರಧೀರ ಸಿದ್ಧೇಶ್ವರ ಚೇತನವಾಗಿ-ಸಮಾಜವಾಗಿ ಕಾಣುತ್ತವೆ. ವ್ಯಕ್ತಿಗಿಂತ ಸಮಾಜ ಅಥವಾ ಸಮುದಾಯ ಮುಖ್ಯ. ಸಮಾಜದ ಏಳ್ಗೆಗಾಗಿ, ಚೇತನದ ಚಲನಶೀಲತೆಗಾಗಿ ಎಲ್ಲ ವ್ಯಕ್ತಿಗಳು ಶ್ರಮಿಶಬೇಕಲ್ಲದೆ; ಸಮಾಜವನ್ನೇ ಕಡೆಗಣಿಸಿ ವ್ಯಕ್ತಿ ಬೆಳೆಯುವುದರಿಂದ ಯಾವ ಪ್ರಯೋಜನವೂ ಇಲ್ಲವೆಂಬ ಆಶಯ ಇಲ್ಲಿ ವ್ಯಕ್ತವಾಗಿದೆ.

ಪ್ರಕೃತಿಯಲ್ಲಿ ಎಲ್ಲವೂ ಇದೆ. ಆಕೃತಿಗಿಂತ ಪ್ರಕೃತಿ ದೊಡ್ಡದು, ವ್ಯಕ್ತಿಗಿಂತ ಸಮಾಜ ಮಹತ್ವದ್ದು. ಫಲಬಿಟ್ಟಿರುವ ರೆಂಬೆ ಬಾಗುತ್ತದೆ, ಗೊನೆ ಹೊತ್ತಿರುವ

ಬಾಳೆ ಬಾಗುತ್ತದೆ, ತೆನೆ ಹೊತ್ತಿರುವ ದಂಟು ಬಾಗುತ್ತದೆ ಏನೂ ಇಲ್ಲದ ಮನುಷ್ಯ ಬೀಗುತ್ತಾನೆಂದು ಹೇಳುವ ಮೂಲಕ ಪುರಾಣಿಕರು ಇಲ್ಲಿ ಸಮಷ್ಟೀ ಪ್ರಜ್ಞೆಯ ಮಹತ್ವವನ್ನು ಹೇಳಿದ್ದಾರೆ. ಏನೂ ಇಲ್ಲದ, ಏನೂ ಸಾಧಿಸದ ಮನುಷ್ಯ ಪ್ರಕೃತಿಯಿಂದ ಕಲಿಯುವುದು ಸಾಕಷ್ಟಿದೆ. ಇಲ್ಲಿ ಸಮಾಜವೇ ಜಂಗಮ, ಪ್ರಕೃತಿಯೇ ಚೇತನ. ಇಂತಹ ಚೇತನಶೀಲ ಜಂಗಮ ಪರಿಕಲ್ಪನೆಯನ್ನು ಬೆಳೆಸುತ್ತಲೇ ಸ್ಥಾವರವನ್ನು ಪುರಾಣಿಕರು ವಿರೋಧಿಸಿದ್ದಾರೆ.

**"ಹಕ್ಕಿಯ ಹಾರಾಟ ಪಕ್ಕದ ಬಲದಿಂದಲೋ ಪ್ರಾಣದ ಬಲದಿಂದಲೋ?**
**ಬೀಜದ ಮೊಳೆತ ಭೂಮಿಯ ಬಲದಿಂದಲೋ ನೀರಿನ ಬಲದಿಂದಲೋ?**
**ನೋಡುವವನ ನೋಟ ಕಣ್ಣಿನ ಬಲದಿಂದಲೋ ಬೆಳಕಿನ ಬಲದಿಂದಲೋ?**
**ಬಾಳಿನ ಸಾರ್ಥಕತೆ ಬುದ್ಧಿಯ ಬಲದಿಂದಲೋ ಭಾವದ ಬಲದಿಂದಲೋ?"**

ಎಂಬಂತಹ ಪ್ರಶ್ನೆಗಳನ್ನು ಕೇಳುತ್ತಾ ಬೆಳೆದು ನಿಲ್ಲುವ ಈ ವಚನದಲ್ಲಿ, ಕೊನೆಯಲ್ಲಿ ಇವೆರಡರ ಬಲವೂ ಅಗತ್ಯವೆಂಬ ತೀರ್ಮಾನಕ್ಕೆ ಬರಲಾಗಿದೆ. ಇಲ್ಲಿ ಬರುವ ಪಕ್ಕ-ಪ್ರಾಣ, ಭೂಮಿ-ನೀರು, ಕಣ್ಣು-ಬೆಳಕು, ಬುದ್ಧಿ-ಭಾವ ಇವು ಒಂದಕ್ಕೊಂದು ಪೂರಕ ವಾದವುಗಳಾಗಿವೆ. ಒಂದು ಹೆಚ್ಚು-ಒಂದು ಕಡಿಮೆಯೆಂದು ವಾದ ಮಾಡುವದಕ್ಕಿಂತ ಇವೆರಡನ್ನೂ ಸಮನ್ವಯಗೊಳಿಸಿ ಅದರ ಪ್ರಯೋಜನ ಪಡೆಯುವುದು ಬಹುಮುಖ್ಯವೆಂಬ ಸಂಗತಿಯನ್ನು ಈ ವಚನದಲ್ಲಿ ತಿಳಿಸಲಾಗಿದೆ.

ಕಾವ್ಯಾನಂದರ ಮೂಲ ಆಶಯವೇ ಚಲನಶೀಲತೆಯಾಗಿದೆ. ಸ್ಥಗಿತತೆಯನ್ನು ಅವರು ಕೈಬಿಡುತ್ತಲೇ ಚಲನಶೀಲತೆಯನ್ನು ಒಪ್ಪಿಕೊಳ್ಳುತ್ತಾರೆ. ಅದಕ್ಕೆ ಅವರು ತಮ್ಮ ವಚನಗಳಲ್ಲಿ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ.

೧) ತುಕ್ಕು ಹಿಡಿದು ಉಳಿವುದಕ್ಕಿಂತ ತಿಕ್ಕಿ ಬಳಸಿ ಅಳಿವುದು ಮೇಲು

೨) ಹುಳು ಹತ್ತಿ ಕೊಳೆವುದಕ್ಕಿಂತ, ಮಣ್ಣು ಬೆರೆತು ಮೊಳೆವುದು ಮೇಲು.

೩) ಇಟ್ಟು, ನುಸಿಮುಟ್ಟಿ ನಶಿಸುವದಕ್ಕಿಂತ, ತೊಟ್ಟು ಉಟ್ಟು ಹರಿಯುವುದು ಮೇಲು.



೪) ಉಂಡು ಮಲಗಿ ಬೊಜ್ಜು ಬೆಳೆಸುವದಕ್ಕಿಂತ, ಮಾಡಿ ಮಡಿವುದು ಮೇಲು.

೫) ಓದಿ, ಬೋಧಿಸಿ ವಾದಿಸುವದಕ್ಕಿಂತ, ಅರಿತು ಆಚರಿಸಿ ಆದರ್ಶವಾಗುವುದು ಮೇಲು.

ಇಂತಹ ಅನೇಕ ಚಿಂತನ ರೂಪದ ನುಡಿಗಳನ್ನು ಪುರಾಣಿಕರ ವಚನಗಳಲ್ಲಿ ಕಾಣಬಹುದಾಗಿದೆ. ಇಲ್ಲಿಯ ಪದ ಜೋಡಣೆ, ಅರ್ಥ ನಿರೂಪಣೆ, ಪ್ರಾಸಬದ್ಧ ಅಭಿವ್ಯಕ್ತಿ ಓದುಗರಲ್ಲಿ ಹಸಿರಾಗಿ ಉಳಿಯುತ್ತವೆ. ಸಣ್ಣ ಸಣ್ಣ ವಿಷಯವೆಂದೆನಿಸಿದರೂ, ಹೇಳುವ ಕ್ರಮದಲ್ಲಿ ಹೊಸತನವಿದೆ. ಇಂತಹ ಅನೇಕ ನುಡಿಗಳು ಓದುಗನ ಮನವನ್ನು ಹಿಡಿದಿಡುತ್ತವೆ.

**"ಹಿತ್ತಾಳೆ ಕಿಲುಬು ಬಿಡುವುದೆಂದು**
**ಚಿನ್ನವೂ ಕಿಲುಬು ಬಿಟ್ಟರೆ ಹೇಗಯ್ಯ?**
**ಕಬ್ಬಿಣ ತುಕ್ಕು ಹಿಡಿಯುವುದೆಂದು**
**ವಜ್ರಕ್ಕೂ ತುಕ್ಕು ಹಿಡಿದರೆ ಹೇಗಯ್ಯ?**
**ಬೇರೆ ಕಟ್ಟಿಗೆಗೆ ಗೊರಲೆ ಹತ್ತುವುದೆಂದು**
**ತೇಗಿಗೂ ಗೊರಲೆ ಹತ್ತಿದರೆ ಹೇಗಯ್ಯ?**
**ದಡ್ಡರು ಅಡ್ಡಹಾದಿ ಹಿಡಿಯುವರೆಂದು**
**ದೊಡ್ಡವರೂ ಅಡ್ಡಹಾದಿ ಹಿಡಿದರೆ ಹೇಗಯ್ಯ?"**

ಈ ವಚನ ಇವತ್ತಿನ ಸಂದರ್ಭಕ್ಕಂತೂ ತುಂಬ ಪ್ರಸ್ತುತವಾಗಿದೆ. ಒಬ್ಬರನ್ನು ನೋಡಿ ಒಬ್ಬರು ದುಷ್ಟರಾಗುವ; ಒಂದು ಪಕ್ಷವನ್ನು ನೊಡಿ ಮತ್ತೊಂದು ಪಕ್ಷ ಭ್ರಷ್ಟವಾಗುವ ಈ ದಿನಗಳಲ್ಲಿ ಪುರಾಣಿಕರ ಈ ವಚನ ತೀವ್ರ ಪರಿಣಾಮವನ್ನುಂಟು ಮಾಡುತ್ತದೆ. ಅವರು ಈ ವಚನದಲ್ಲಿ ಹಿತ್ತಾಳೆ-ಚಿನ್ನ, ಕಬ್ಬಿಣ-ವಜ್ರ, ಸಾದಾ ಕಟ್ಟಿಗೆ-ತೇಗಿನ ಕಟ್ಟಿಗೆ ಇವುಗಳಲ್ಲಿ ಹೋಲಿಕೆ ಏರ್ಪಡಿಸಿದ್ದಾರೆ. ಸಮಾಜ ವ್ಯವಸ್ಥೆಯಲ್ಲಿಯೂ ಕೂಡ ಈ ವಸ್ತುಗಳ ತರಹ, ಎಲ್ಲ ನಮೂನೆಯ ಜನರೂ ಇರುತ್ತಾರೆ. ಒಬ್ಬರ ಸ್ವಭಾವ ಮತ್ತೊಬ್ಬರಂತಿರುವುದಿಲ್ಲ. ಆದರೆ ವ್ಯವಸ್ಥೆಗೆ ಆದರ್ಶವಾಗಬೇಕಾಗಿರುವುದು

ಒಳ್ಳೆಯ ಸ್ವಭಾವದ ಜನತೆಯೇ ಹೊರತು ದುಷ್ಟಸ್ವಭಾವದ ಜನತೆಯಲ್ಲ. ಇದನ್ನೇ ಅವರು "ದಡ್ಡರು ಅಡ್ಡಹಾದಿ ಹಿಡಿಯುವರೆಂದು, ದೊಡ್ಡವರೂ ಅಡ್ಡಹಾದಿ ಹಿಡಿದರೆ ಹೇಗಯ್ಯ?" ಎಂದು ಪ್ರಶ್ನಿಸಿದ್ದಾರೆ.

ಸಮಾಜದಲ್ಲಿ ಒಳ್ಳೆಯವರು-ಕೆಟ್ಟವರು, ಸರಿ-ತಪ್ಪು ಎರಡೂ ಇರುತ್ತವೆ. ಆದರೆ ಕೆಟ್ಟವರು ಒಳ್ಳೆಯವರನ್ನು ನೋಡಿ ತಾವೂ ಒಳ್ಳೆಯವರಾಗಲು ಪ್ರಯತ್ನಿಸಬೇಕು. ಒಳ್ಳೆಯವರಾಗುತ್ತಲೇ ಸಮಾಜಕ್ಕೆ ಒಳ್ಳೆಯದು ಮಾಡುವುದನ್ನು ಕಲಿಯಬೇಕು, ಆಗ ಮಾತ್ರ ಸಮಾಜ ಸುಧಾರಣೆ ಸಾಧ್ಯ. ಆದರೆ ಇಂದು ಕೆಟ್ಟವರು, ಗೂಂಡಾಗಳು, ಕೋಮುವಾದಿಗಳು, ಭಯೋತ್ಪಾದಕರು ಇವರೇ ಆದರ್ಶವಾಗುತ್ತಿದ್ದಾರೆಯೇ? ಎಂಬ ಪ್ರಶ್ನೆ ಬಂದಾಗ ಬದುಕು ಭಯಾನಕವೆನಿಸುತ್ತದೆ.

ಹೀಗೆ ಪುರಾಣಿಕರ ಚಿಂತನೆಗಳು ದಿನನಿತ್ಯದ ಸಾಮಾನ್ಯ ಸಂಗತಿಗಳನ್ನೇ ಎತ್ತಿಕೊಂಡು ಹೊಸಚರ್ಚೆಯನ್ನು ಪ್ರಾರಂಭಿಸುತ್ತವೆ. ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದ್ದರೂ, ಅವರ ತಾರ್ಕಿಕ ಅಭಿವ್ಯಕ್ತಿಯಿಂದ ಅಲ್ಲಿ ಅನೇಕ ಕುತೂಹಲಕಾರಿ ಸಂಗತಿಗಳು ಕಾಣಿಸಿಕೊಳ್ಳುತ್ತವೆ. ಹಿಂದಿನ ವೈಭವೀಕರಣಕ್ಕಿಂತ, ಇಂದಿನ ವಾಸ್ತವ ಅವರಿಗೆ ಮುಖ್ಯವಾಗಿ ಕಾಣುತ್ತದೆ. ಅವರ ಆಲೋಚನಾ ಕ್ರಮ ಅತ್ಯಂತ ಪ್ರಗತಿಪರವಾಗಿದೆ. ಆದರೇನು ಬಂಡಾಯದ ಕಾವನ್ನು ಹೊಂದದೆ, ಸುಧಾರಣೆಯ ಹಾದಿಯಲ್ಲಿ ತಣ್ಣಗಾಗಿ ಬಿಡುತ್ತದೆ. ಬಂಡಾಯವಾದಿಗಳ ಅತಿಯನ್ನು, ಸುಧಾರಣಾವಾದಿಗಳ ಮಿತಿಯನ್ನು ಪುರಾಣಿಕರು ದಾಟಬಲ್ಲರೇ? ಎಂಬುದು ಕೊನೆತನಕ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಇತಿಹಾಸವನ್ನು ವೈಭವೀಕರಿಸುವುದು, ಹಿಂದಿನವರನ್ನು ಹೊಗಳುವುದು ಸಾಮಾನ್ಯ. ಆದರೆ ಪುರಾಣಿಕರ ಚಿಂತನೆ ಭಿನ್ನವಾಗಿ ಬೆಳೆದುನಿಲ್ಲುತ್ತದೆ. ಸತ್ತ ಸಿಂಹಕ್ಕಿಂತ ಜೀವಂತ ನಾಯಿ ಲೇಸಯ್ಯ ಎನ್ನುತ್ತಾರೆ. ಹೊತ್ತಿಗೆ ಒದಗದ ಮುತ್ತಿನ ಸತ್ತಿಗೆಗಿಂತ ಹೊತ್ತಿಗಾದ ಮುತ್ತಲ ಎಲೆ ಮೇಲಯ್ಯ ಎನ್ನುತ್ತಾರೆ. ದೂರದ ಬೆಟ್ಟ ನುಣ್ಣಗೆಯೆನ್ನುವ ಭ್ರಮೆಯನ್ನು ಬಿಟ್ಟು, ಎದುರಿಗಿರುವ ವಿಷಯಗಳತ್ತ ಗಮನಹರಿಸಬೇಕೆಂದು ಹೇಳುತ್ತಾರೆ. ಈ ಸಮಾಜ ವ್ಯವಸ್ಥೆಯಲ್ಲಿ ಅನೇಕ ಜನ ಭ್ರಮೆಗಳಲ್ಲಿಯೇ ಬದುಕುತ್ತಿರುತ್ತಾರೆ. ಅವರಿಗೆ ಕಣ್ಣಿಗೆ ಕಾಣಿಸುವದರ ಮೇಲೆ ಗಮನವಿರದೆ, ಕಣ್ಣಿಗೆ ಕಾಣಿಸದೇ ಇರುವುದರ ಕಡೆಗೆ ಕುತೂಹಲವಿರುತ್ತದೆ. ಇಲ್ಲಿಯ ಸಂಗತಿಗಳ ಕಡೆಗೆ ಗಮನವಿರದೆ, ಅಲ್ಲಿಯ ಕಲ್ಪನಾಲೋಕದ ಕಡೆ ಗಮನವಿರುತ್ತದೆ. ಆದರೆ ಪುರಾಣಿಕರು ವಚನಕಾರರಿಂದ ಪ್ರಭಾವಿತರಾದವರು, ಹೀಗಾಗಿ ಅವರಿಗೆ ಇಲ್ಲಿಯದು ಮುಖ್ಯ ವಾಗುತ್ತದೆ, ಇಹ ಮಹತ್ವದ್ದಾಗಿ ಕಾಣುತ್ತದೆ. ತಿಳಿಯದ ತಾವಿನಲ್ಲಿ ಹೂಳಿದ(ನಿಧಾನ) ಸಂಪತ್ತಿಗಿಂತ, ಕೈಯೊಳಗಿರುವ ಒಂದು ನಾಣ್ಯ ಮುಖ್ಯ ವಾಗುತ್ತದೆ. ಶರಣರ ಕಾಯಕ, ಮೌಲ್ಯವಾಗಿ ಅವರಲ್ಲಿ ಪ್ರಭಾವವನ್ನುಂಟು ಮಾಡಿದೆ. ದಾಸೋಹ, ಸತ್ಯವಾಗಿ ಕಾಣಿಸಿಕೊಂಡಿದೆ. ಅಂತೆಯೇ ಅವರ ಚಿಂತನೆಗಳು ಜೀವಪರವಾಗಿ, ಬಡವರ ಪರವಾಗಿ, ದುಡಿಯುವವರ ಪರವಾಗಿ ಮಾತನಾಡುತ್ತವೆ.

■

# ಸಾಮಾಜಿಕ ವಿಡಂಬನೆ

ಪುರಾಣಿಕರಿಗೆ ಸಮಾಜದ ಬಗೆಗೆ ಜನಸಮುದಾಯದ ಬಗೆಗೆ ಅಪಾರ ಕಾಳಜಿಯಿದೆ. ಆಧುನಿಕ ವಚನಕಾರರಲ್ಲಿ ಕೆಲವರು ಬರೀ ಅಧ್ಯಾತ್ಮವನ್ನು ಹೇಳಿದರೆ, ಕೆಲವರು ಬರೀ ಸಾಮಾಜಿಕವನ್ನು ಕುರಿತು ಮಾತನಾಡಿದ್ದಾರೆ. ಆದರೆ ಪುರಾಣಿಕರು ಸಾಮಾಜಿಕದ ಮೂಲಕ ಅಧ್ಯಾತ್ಮವನ್ನು ಹೇಳಿದ್ದಾರೆ, ಇದು ಈ ಕವಿಯ ವಿಶಿಷ್ಟತೆಯಾಗಿದೆ.

ಚಳುವಳಿ, ಕ್ರಾಂತಿಯ ಮೂಲಕ ಈ ಸಮಾಜ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂಬ ಉದ್ದೇಶ ಈ ವಚನಕಾರನದಲ್ಲ. ಇವರು ಒಬ್ಬ ಐ.ಎ.ಎಸ್ ಅಧಿಕಾರಿಯಾಗಿದ್ದವರು, ಇಂತವರು ಸಮಾಜ ಪರಿವರ್ತನೆಯ ಬಗೆಗೆ, ಸಮಾಜಿಕ ಕ್ರಾಂತಿಯ ಬಗೆಗೆ ಸೈದ್ಧಾಂತಿಕವಾಗಿ ಚರ್ಚಿಸಲು ಸಾಧ್ಯವಾಗುವುದಿಲ್ಲ. ಆದರೆ ಪುರಾಣಿಕರಲ್ಲಿರುವ ಸಾಮಾಜಿಕ ಕಳಕಳಿಯ ತೀವ್ರತೆಯನ್ನು ಗಮನಿಸಲೇಬೇಕು. ಇವರು ಹೈಸ್ಕೂಲು ಓದುತ್ತಿದ್ದ ಕುಕನೂರಿನ ವಿದ್ಯಾನಂದ ಗುರುಕುಲ ಹೈಸ್ಕೂಲದಲ್ಲಿಯೇ ಆಗ ಅಸ್ಪೃಶ್ಯತಾ ನಿವಾರಣೆಯ ಬಗೆಗೆ ಕಳಕಳಿ ತೋರಿಸಿದವರು. ಇವರ ಮೇಲೆ ವಚನಕಾರರ ಜತೆಗೆ ಗಾಂಧೀಜಿ ಮತ್ತು ಹರ್ಡೇಕರ ಮಂಜಪ್ಪನಂತವರ ಪ್ರಭಾವವಾಗಿದೆ. ಹೀಗಾಗಿ ಇವರೊಬ್ಬ ದೊಡ್ಡ ಅಧಿಕಾರಿಯಾಗಿ ಎಲ್ಲ ಸವಲತ್ತುಗಳನ್ನು ಪಡೆದು ಸುಖೀ ಜೀವನ ನಡೆಸಿದರೂ ಇವರಿಗೆ ಬಡವರ ಬಗೆಗೆ, ಅಸ್ಪೃಶ್ಯರ ಬಗೆಗೆ, ದುಡಿವವರ ಬಗೆಗೆ ಅಪಾರವಾದ ಕಳಕಳಿಯಿದೆ, ಅಂತಃಕರಣದ ಮನಸ್ಸಿದೆ. ಹೀಗಾಗಿ ಇವರು ಸಮಾಜದ ಬಗೆಗೆ ಅಧಿಕೃತವಾಗಿ ಮಾತನಾಡಬಲ್ಲವರಾಗಿದ್ದಾರೆ. ತಮ್ಮ ಅಧಿಕಾರವಧಿಯಲ್ಲಿ ಹರಿಜನರಿಗೆ ಅನೇಕ ಮನೆಗಳನ್ನು ಸರಕಾರದ ಯೋಜನೆಗಳಿಂದ ಕಟ್ಟಿಸಿ ಕೊಟ್ಟಿದ್ದಾರೆ.



ನಿಜಾಮರ ಆಡಳಿತದಲ್ಲಿ ಇವರು ಅಧಿಕಾರಿಗಳಾಗಿದ್ದರು. ಆಗ ಲೇವಿ ವಸೂಲಿ ಮಾಡುವ ಕಾರ್ಯ ಅಧಿಕಾರಿಗಳದಾಗಿತ್ತು. ಅಂತಹ ಸಂದರ್ಭದಲ್ಲಿ ಬಡವರ ಮನೆಗಳನ್ನು ಜಪ್ತ ಮಾಡದಂತೆ, ಬಡವರ ಪರವಾಗಿ ನಿಂತ ಅಧಿಕಾರಿಗಳಲ್ಲಿ ಪುರಾಣಿಕರೂ ಒಬ್ಬರು. ಹೀಗಾಗಿ ಈ ಕವಿಗೆ ಸಮಾಜದ ಬಗೆಗೆ ಕಳಕಳಿಯಿದೆ.

ಈ ಸಮಾಜ ವ್ಯವಸ್ಥೆಯಲ್ಲಿ ಮೂಢನಂಬಿಕೆಗಳಿರಬಾರದು, ಅಂಧ ಶ್ರದ್ಧೆಗಳಿರಬಾರದೆಂಬ ನಿಲುವು ಈ ವಚನಕಾರರದು. ಆದರೆ ಈ ಮೌಢ್ಯತೆಗೆ, ಇಲ್ಲಿಯ ಅನಕ್ಷರತೆಗೆ ಹಾಗೂ ಅಸಮಾನತೆಗೆ ಕಾರಣಗಳೇನೆಂಬುದನ್ನು ಕುರಿತು ಅವರು ಚಿಂತಿಸುವುದಿಲ್ಲ. ಹೀಗಾಗಿ ಅವರ ಸಾಮಾಜಿಕ ಕಳಕಳಿ ಮತ್ತು ಸಾಮಾಜಿಕ ವಿಡಂಬನೆ, ಸುಧಾರಣಾವಾದದ ಹಂತಕ್ಕೆ ನಿಂತುಬಿಡುತ್ತದೆ. ಆದರೂ ಸಮಾಜ ವ್ಯವಸ್ಥೆಯ ಮೇಲ್ವರ್ಗದ ಶಾಸ್ತ್ರಿ-ಪೂಜಾರಿಗಳ ಕಪಟತನವನ್ನು ಕುರಿತು ವಿಡಂಬಿಸಿರುವುದು, ಆ ಕಾಲದಲ್ಲಿ ಸ್ವಾಗತಾರ್ಹ ವಿಚಾರವೇ ಆಗಿದೆ.

**"ಸಾಯುವವರೆಗೂ ಶಾಸ್ತ್ರ ಹೇಳಿದರೇನು**
**ಸುಳ್ಳು ಹೇಳುವುದ ಬಿಡಲಿಲ್ಲ ಶಾಸ್ತ್ರಿಗಳ ಬಾಯಿ,**
**ಸಾಯುವವರೆಗೆ ಪೂಜೆ ಮಾಡಿದಡೇನು**
**ಭಕ್ತರ ಬೋಳಿಸುವುದ ಬಿಡಲಿಲ್ಲ ಪೂಜಾರಿಯ ಕೈ,**
**ಹಲವು ಅರಸೊತ್ತಿಗೆಗಳು ಬಂದು ಹೋದರೇನು**
**ಹಳ್ಳಿಗರ ಕೂಗ ಕೇಳಿರಲಿಲ್ಲ ಡಿಳ್ಳಿಯ ಕಿವಿ...."**

ಇಂತಹ ವಚನಗಳ ಮೂಲಕ ಪುರಾಣಿಕರು ಸಾಮಾಜಿಕ ವಿಡಂಬನೆಗೆ ತೊಡಗುತ್ತಾರೆ. ಅವರು ಆಳುವ ವ್ಯವಸ್ಥೆಯನ್ನು ನೇರವಾಗಿ ವಿರೋಧಿಸುವುದಿಲ್ಲ. ಏಕೆಂದರೆ ಅದರಲ್ಲಿ ಅವರೂ ಒಬ್ಬ ಉನ್ನತ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು, ಹೀಗಾಗಿ ಅವರು ವೈದಿಕ ವ್ಯವಸ್ಥೆಯನ್ನು ಕುರಿತು ವಿಡಂಬನೆಗೆ ತೊಡಗುತ್ತಾರೆ. ಇಂತಹ ಸಾಮಾಜಿಕ ಸುಧಾರಣೆಯ ತೇಪೆ ಕೆಲಸಗಳೂ ಕೂಡ ಆ ಕಾಲಘಟ್ಟದಲ್ಲಿ ಮುಖ್ಯವಾಗಿದ್ದ

ವೆಂಬುದನ್ನು ಮರೆಯುವಂತಿಲ್ಲ. ಪುರಾಣಿಕರಿಂದ, ಸಮಾಜ ವ್ಯವಸ್ಥೆಯ ಬಗೆಗೆ ಪೂರ್ಣಪ್ರಮಾಣದ ಹೋರಾಟವನ್ನು ನಿರೀಕ್ಷೆ ಮಾಡದಿದ್ದರೂ ಕೂಡ, ಅವರಲ್ಲಿ ತೀವ್ರವಾಗಿದ್ದ ಸಾಮಾಜಿಕ ಕಳಕಳಿಯನ್ನು ಅಲ್ಲಗಳೆಯುವಂತಿಲ್ಲ. ಆ ಸಂದರ್ಭದಲ್ಲಿಯೇ ಅವರು ಮಠ-ಮಾನ್ಯಗಳನ್ನು ವಿರೋಧಿಸಿರುವುದು ಇಂದಿಗೂ ಕೂಡ ಪ್ರಸ್ತುತವಾಗುತ್ತದೆ.

ಡಾಂಭಿಕ-ಭಕ್ತರನ್ನು ಕುರಿತು ಕಾವ್ಯಾನಂದರು ನೇರವಾಗಿ ವಿಡಂಬಿಸಿದ್ದಾರೆ. ಬದುಕಿನಲ್ಲಿ ಭಕ್ತಿ-ಪ್ರೀತಿಯಂತಹ ಮೌಲ್ಯಗಳು ಇರಬೇಕು. ಆದರೆ ಭಕ್ತಿಯ ಹೆಸರಿನಲ್ಲಿ ಡಾಂಭಿಕತೆ, ಪ್ರೀತಿಯ ಹೆಸರಿನಲ್ಲಿ ಮೋಸ ನಡೆಯಬಾರದು. ಇಂದು ಸಮಾಜದಲ್ಲಿ ಡಾಂಭಿಕ ಭಕ್ತರ ಸಂಖ್ಯೆಯೇ ಹೆಚ್ಚಾಗಿದೆ. ಅಂತವರನ್ನು ಕುರಿತು ಕವಿ ಹೀಗೆ ವಿಡಂಬಿಸಿದ್ದಾರೆ.

> "ಭಸ್ಮ ಬಳಿದೊಡಿಲ್ಲ, ಗಂಧ ತಳೆದೊಡಿಲ್ಲ, ಗಡ್ಡ ಬೆಳೆದೊಡಿಲ್ಲ
> ಶಿಲುಬೆ ಧರಿಸಿದೊಡಿಲ್ಲ, ಮುದ್ರೆ ಮೆರೆದೊಡಿಲ್ಲ
> ಬಾಹ್ಯ ಚಿಹ್ನೆಗಳಿಂದ ಭಕ್ತರಾದವರುಂಟೆ?...."

ಎಂದು ನೇರವಾಗಿ ಪ್ರಶ್ನಿಸುವ ಪುರಾಣಿರ ವಚನಗಳಲ್ಲಿ ಡಾಂಭಿಕ ಜನರ ಬಗೆಗೆ ಸಾತ್ವಿಕ ಸಿಟ್ಟು ಇರುವುದು ಕಂಡುಬರುತ್ತದೆ. ಭಸ್ಮ-ಗಂಧ-ಶಿಲುಬೆ-ಮುದ್ರೆಯಂತಹ ಲಾಂಛನಗಳು ಸಾಂಕೇತಿಕವಾಗಬೇಕೆ ಹೊರತು, ಅವೇ ಭಕ್ತಿಯ ರಹದಾರಿಗಳಾಗಬಾರದು.ವೇಷಧರಿಸುವದರಿಂದ, ಲಾಂಛನ ಹಾಕಿಕೊಳ್ಳುವದರಿಂದ ಭಕ್ತರಾಗಲು ಸಾಧ್ಯವಿಲ್ಲ. ಭಕ್ತಿಯೆಂಬುದು ಅಂತರಂಗದಲ್ಲಿ ಹುಟ್ಟುವ ಪ್ರೀತಿಯ ಬೀಜ. ದೇವರಲ್ಲಿ ಪ್ರೀತಿ ಗಾಢವಾದಾಗ ಭಕ್ತಿಯ ಹುಟ್ಟು ಪ್ರಾರಂಭವಾಗುತ್ತದೆ. ಭಸ್ಮ ಧರಿಸಿದವರನ್ನು ಭಕ್ತರೆಂದು ತಿಳಿಯುವುದು, ಬೂದಿ ಬಳಿದವರನ್ನು ವಿರಕ್ತರೆಂದು ಭಾವಿಸುವುದು ತಪ್ಪೆಂದು ಪುರಾಣಿಕರು ಈ ವಚನದಲ್ಲಿ ತಿಳಿಸಿದ್ದಾರೆ. ವೇಷಗಾರಿಕೆ, ಮೋಸಗಾರಿಕೆಯಿಂದೇನು ಪ್ರಯೋಜನವಾಗುವದಿಲ್ಲ, ಮೊದಲು ಅಂತರಂಗ ಶುದ್ಧಿಯಾಗಬೇಕೆಂದು ಹೇಳಿದ್ದಾರೆ. ಡಾಂಭಿಕ-ಭಕ್ತರನ್ನು ಕುರಿತು ಹನ್ನೆರಡನೇ ಶತಮಾನದ ಶಿವಶರಣರು ನೇರವಾಗಿಯೇ ವಿಡಂಬಿಸಿದ್ದಾರೆ.



ಅದೇ ಪ್ರಭಾವ ಸಿದ್ಧಯ್ಯ ಪುರಾಣಿಕರ ವಚನಗಳಲ್ಲಿ ಕಾಣಿಸುತ್ತದೆ. ತನುವ ತೊಳೆಯುವದರ ಜತೆಗೆ, ಮನವ ತೊಳೆಯಬೇಕು. ಲಾಂಛನದ ಜತೆಗೆ ಅಂತರಂಗ ಶುದ್ಧಿ ಇರಬೇಕೆಂದು ಸ್ಪಷ್ಟಪಡಿಸುವ ಈ ನುಡಿಗಳಲ್ಲಿ ಭಕ್ತಿಯ ಮಹತ್ವವನ್ನು ತಿಳಿಸಲಾಗಿದೆ.

ಪುರಾಣಿಕರು ಸಮಾಜವನ್ನು ನೋಡುವ ದೃಷ್ಟಿಕೋನ ಜನಪರವಾದುದ್ದಾಗಿದೆ. ಅವರಿಗೆ ದುರಾಚಾರಿಯಾದ ಪಂಡಿತನಿಗಿಂತ ಸದಾಚಾರಿಯಾದ ಪಾಮರನೇ ಶ್ರೇಷ್ಠನಾಗಿ ಕಾಣಿಸುತ್ತಾನೆ. ನಿಷ್ಕ್ರಿಯನಾದ ಜ್ಞಾನಿಗಿಂತ, ಸಕ್ರಿಯನಾದ ಸಾಮಾನ್ಯನೇ ಸರಿಯೆನಿಸುತ್ತಾನೆ. ಹರಿದು ತಿನ್ನುವ ಬಲ್ಲಿದನಿಗಿಂತ, ಹಂಚಿ ಉಣ್ಣುವ ಬಡವನೇ ದೊಡ್ಡವನಾಗಿ ಕಾಣಿಸುತ್ತಾನೆ. ಹೀಗೆ ಪುರಾಣಿಕರಲ್ಲಿ ಬಡವರ ಬಗೆಗೆ, ಶ್ರಮಿಕರ ಬಗೆಗೆ, ಸಾಮಾನ್ಯರ ಬಗೆಗೆ ಒಲವಿದೆ, ಅವರೂ ಬೆಳೆದು ನಿಲ್ಲಬೇಕೆಂಬ ಹಂಬಲವಿದೆ. ಆದರೆ ಅವರು ಹೇಗೆ ಬೆಳೆಯಬೇಕು, ಅವರ ಈ ಅಸಮಾನತೆಗೆ ಆಳುವ ವ್ಯವಸ್ಥೆ ಹೇಗೆ ಕಾರಣವಾಗಿದೆಯೆಂಬ ಒಳನೋಟಗಳಿಲ್ಲ. ಎಲ್ಲರಿಗೂ ಒಳ್ಳೆಯದಾಗಬೇಕು, "ಸರ್ವೇ ಜನಃ ಸುಖಿನೋಭವಂತಿಃ" ಎಂದು ಹೇಳುವುದು ಸುಲಭ. ಆದರೆ ಅದನ್ನು ಕಾರ್ಯಗತಕ್ಕೆ ತರುವುದು ಕಷ್ಟ. ಈ ಸಮಾಜ ವ್ಯವಸ್ಥೆಯಲ್ಲಿ ಸಮಾನತೆ ತರಬೇಕಾದರೆ, ಬರೀ ಬಾಯಿಂದ ಹೇಳಿದರೆ ಸಮಾನರಾಗುವದಿಲ್ಲ. ಅದಕ್ಕಾಗಿ ತಾತ್ತ್ವಿಕ ಚಿಂತನೆ, ಸಾಮಾಜಿಕ ಸಂಘಟನೆ, ತೀವ್ರ ಹೋರಾಟ ಬೇಕಾಗುತ್ತದೆ. ದುಡಿವ ವರ್ಗವನ್ನು-ಬಡವರನ್ನು ಸಂಘಟಿಸಿ ಚಳುವಳಿಗೆ ಅಣಿಗೊಳಿಸಬೇಕಾಗುತ್ತದೆ. ಆಳುವ ಕ್ರೂರ ವ್ಯವಸ್ಥೆಯ ವಿರುದ್ಧ ಸಾವು-ನೋವುಗಳನ್ನು ಲೆಕ್ಕಿಸದೆ ಹೋರಾಡಬೇಕಾಗುತ್ತದೆ. ಅಂತಹ ಹೋರಾಟಗಳಿಂದ ಮಾತ್ರ ಸಮಾನತೆಯ ಗಾಳಿ ಬೀಸಬಹುದೇ ಹೊರತು, ಸ್ವಾಮಿಗಳ ತರಹ ಉಪದೇಶ ಮಾಡುವದರಿಂದ ಸಮಾನತೆ ಬರುವುದಿಲ್ಲ. ಪುರಾಣಿಕರು ಜಿಲ್ಲಾಧಿಕಾರಿಯಂತಹ ದೊಡ್ಡ ಹುದ್ದೆಯಲ್ಲಿದ್ದವರು, ಆಳುವ ವ್ಯವಸ್ಥೆಯ ಪರವಾಗಿ ನಿಂತವರು. ಹೀಗಾಗಿ ಇಂತವರಿಗೆ ಹೋರಾಟ-ಚಳುವಳಿ ಸಾಧ್ಯವಾಗುವದಿಲ್ಲ. ಇಂತವರು ತಾವಿದ್ದ ವ್ಯವಸ್ಥೆಯಲ್ಲಿಯೇ ಸ್ವಲ್ಪಮಟ್ಟಿನ ಸುಧಾರಣೆ ತರಬಹುದೇ ಹೊರತು ಆಳುವ ವ್ಯವಸ್ಥೆಗೆ

ವಿರುದ್ಧವಾಗಿ ನಿಂತು ಹೋರಾಟ ಹುಟ್ಟು ಹಾಕುವುದು ಸಾಧ್ಯವಾಗುವದಿಲ್ಲ. ಆದರೂ ಉಳಿದ ಅಧಿಕಾರಿಗಳಂತೆ ವ್ಯರ್ಥ ಸಮಯ ಹಾಳುಮಾಡದೆ, ಪುರಾಣಿಕರು ಸಾಹಿತ್ಯ ಕೃಷಿ ಪ್ರಾರಂಭಿಸಿದ್ದು, ಬಡವರ ಬಗೆಗೆ ಅನುಕಂಪ ಹೊಂದಿದ್ದು ನಿಜಕ್ಕೂ ಸ್ವಾಗತಾರ್ಹವಾಗಿದೆ.

ಒಬ್ಬ ಉನ್ನತ ಅಧಿಕಾರಿಯಾಗಿದ್ದೂ ಅವರು ಸರಕಾರವನ್ನು ವಿಡಂಬಿಸಿದ್ದಾರೆ. "ಸರಕಾರ ದರೋಡೆಕಾರನಾದಾಗ, ನೌಕರರು ನರಭಕ್ಷಕರಾಗದಿರುವರೇನಯ್ಯಾ?" ಎಂದು ಪ್ರಶ್ನಿಸಿದ್ದಾರೆ. "ಸಚಿವರೇ ಸುಲಿಗೆಗಾರಾದಾಗ, ಆಪ್ತ ಸಹಾಯಕರು ಡಕಾಯಿತರಾಗರೇನಯ್ಯ?" ಎಂದು ಕೇಳಿದ್ದಾರೆ. ಸರಕಾರದ ವಿರುದ್ಧ ಆಡಿದ ಅವರ ಈ ನುಡಿಗಳು, ನಿವೃತ್ತಿ ನಂತರ ಬರೆದ ವಚನಗಳಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಅವರು ಪ್ರಾಣಿರೂಪಕಗಳ ಮೂಲಕ ಸಮಾಜವನ್ನು ವಿಡಂಬಿಸುವ ರೀತಿ ಕುತೂಹಲಕಾರಿಯಾಗಿದೆ.

**"ಮನೆಕಾಯುವ ನಾಯಿಯನ್ನು ಹೊರಗಿರಿಸಿ**
**ಕದ್ದು ಕುಡಿಯುವ ಬೆಕ್ಕನ್ನು ಒಳಗಿರಿಸಿಕೊಂಡೆವಯ್ಯಾ;**
**ದುಡಿದಿಕ್ಕುವ ಬಡವರನ್ನು ಅಡಿಗೊತ್ತಿ**
**ದೋಚಿ ಉರಿವವರ ಹೊತ್ತು ಮೆರೆಸಿದೆವಯ್ಯಾ"**

ಎನ್ನುವ ನುಡಿಗಳಲ್ಲಿ ಸಾಮಾಜಿಕ ವಿಡಂಬನೆ ಅರ್ಥಪೂರ್ಣವಾಗಿ ಕಾಣಿಸಿ ಕೊಂಡಿದೆ. ಯಾವುದನ್ನು ಮಾಡಬೇಕಾಗಿತ್ತೊ, ಅದನ್ನು ಬಿಟ್ಟು ಮಾಡಬಾರದ್ದನ್ನು ಮಾಡಿದ್ದರಿಂದಲೇ ಇಂತಹ ಪರಿಸ್ಥಿತಿ ಬಂದಿದೆಯೆಂಬ ಪುರಾಣಿಕರ ಚಿಂತನೆಗಳಲ್ಲಿ ಸತ್ಯವಡಗಿದೆ. ಮುಖಂಡರನ್ನೇ ಅವರು ಶಿಖಂಡಿಗಳೆಂದು ಕರೆದಿದ್ದಾರೆ.

ಮಂತ್ರಿಗಳ ಮನೆಗೆ ತಿರುಗುವ ಸ್ವಾಮಿಗಳನ್ನು ಕುರಿತು, ರಾಜಕಾರಣಿಗಳ ಬಾಲಹಿಡಿದು ತಿರುಗುವ ಬುದ್ಧಿಜೀವಿಗಳನ್ನು ಕುರಿತು, ಶಾಸಕರಿಗೆ ಕೊಡೆ ಹಿಡಿಯುವ ಸರಕಾರದ ಅಧಿಕಾರಿಗಳನ್ನು ಕುರಿತು ಪುರಾಣಿಕರು ತೀವ್ರವಾಗಿ ವಿಡಂಬಿಸಿದ್ದಾರೆ.



ಈ ಸಮಾಜ ವ್ಯವಸ್ಥೆಯಲ್ಲಿ ಬಡವ ಸತ್ತರೆ, ಅವನನ್ನು ಹುಗಿಯಲಿಕ್ಕೂ ಸ್ಥಳವಿಲ್ಲದಂತಾಗಿದೆ. ಆದರೆ ಅದೇ ಒಡೆಯ ಸತ್ತರೆ ಚಂದನದ ಚಿತೆ ಸಿದ್ಧವಾಗುತ್ತದೆಯೆಂದು ಹೇಳುವ ಪುರಾಣಿಕರ ವಚನಗಳಲ್ಲಿ ಬಡವರ ಬಗೆಗೆ, ಅಶಿಕ್ಷಿತರ ಬಗೆಗೆ, ಅಪಾರ ಕಾಳಜಿಯಿದೆ. ಸಾಕಿದ ನಾಯಿಯನ್ನು ಕಾರಿನಲ್ಲಿ ಕೂಡಿಸಿಕೊಂಡು ತಿರುಗುವ ಮೇಲ್ವರ್ಗದವರು, ದುಡಿವ ದಲಿತನನ್ನು ಬಾಗಿಲಾಚೆ ನಿಲ್ಲಿಸುತ್ತಾರೆಂದು ನೇರವಾಗಿ ವಿಡಂಬಿಸುವ ಈ ಕವಿಯ ವಚನಗಳಲ್ಲಿ ದಲಿತರ ಬಗೆಗೆ ಕಳಕಳಿಯಿದೆ.

■

# ಸಂಪ್ರದಾಯ–ಮೂಢನಂಬಿಕೆ

ಪುರಾಣಿಕರು ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದವರು, ಪುರಾಣಿಕರಾದುದರಿಂದ ಇವರ ಮನೆತನದಲ್ಲಿಯೇ ಅನೇಕ ಮೂಢನಂಬಿಕೆಗಳು ಮನೆಮಾಡಿದ್ದವು. ಅದರೆ ಪುರಾಣಿಕರು ಕಾವ್ಯಾನಂದರಾದ ಮೇಲೆ ತೀವ್ರತರವಾದ ಬದಲಾವಣೆಯಾಯಿತು. ಬಸವಣ್ಣನವರ ವಚನಗಳ ಓದಿನಿಂದ ಪ್ರಭಾವಿತರಾದ ಇವರು ಮೂಢನಂಬಿಕೆ–ಅಂಧಸಂಪ್ರದಾಯಗಳ ವಿರುದ್ಧ ದನಿಯೆತ್ತಿದರು. ಇದು ಪುರಾಣಿಕರ ಮನೆತನದಲ್ಲಾದ ಬಹು ಮಹತ್ವದ ಬೆಳವಣಿಗೆಯೆನ್ನ ಬಹುದಾಗಿದೆ. ಇವರ ಮನೆತನದ ಹಿರಿಯರೆಲ್ಲ ಮಡಿ–ಮೈಲಿಗೆ ಆಚರಿಸಿದವರೇ ಆಗಿದ್ದರು. ಜಂಗಮರ ಮನೆತನದಲ್ಲಿ ಹುಟ್ಟಿ ಮಂತ್ರ–ತಂತ್ರಗಳ ಪರಿಸರದಲ್ಲಿಯೇ ಪುರಾಣಿಕರು ಬೆಳದಿದ್ದರು. ಉದಗಿರಿಯ(ಮಹಾರಾಷ್ಟ್ರ) ಹಾವಗಿಸ್ವಾಮಿ ಮಠಕ್ಕೆ ಸ್ವಾಮಿಯಾಗುವಂತೆ ಪುರಾಣಿಕರಿಗೆ ಆಹ್ವಾನವೂ ಬಂದಿತ್ತು. ಇವರ ತಂದೆಯವರೂ ಕೂಡ ನಿರ್ಣಯ ತೆಗೆದುಕೊಳ್ಳುವುದನ್ನು ಪುರಾಣಿಕರ ಮೇಲೆ ಬಿಟ್ಟಿದ್ದರು. ಆಗ ಪುರಾಣಿಕರು, ಸ್ವಾಮಿ ಸ್ಥಾನವನ್ನು ಖಡಾಖಂಡಿತವಾಗಿ ನಿರಾಕರಿಸಿದರು. ಅಂದು ಸಿದ್ಧಯ್ಯ, ಮಠದ ಸ್ವಾಮಿಯಾಗಿ ಹೋಗಿದ್ದರೆ, ಸಾಮಾಜಿಕ ಕಳಕಳಿಯ ಕಾವ್ಯಾನಂದ ಹುಟ್ಟುತ್ತಿರಲಿಲ್ಲವೇನೊ ಅನಿಸುತ್ತದೆ.

ಅಂತಹ ಸಂಪ್ರದಾಯಸ್ಥ ಕುಟುಂಬದಿಂದ ಬೆಳೆದುಬಂದ ಸಿದ್ಧಯ್ಯ ಪುರಾಣಿಕ, ಪ್ರಖರ ವಿಚಾರವಾದಿಯಾಗಿ ಬೆಳೆದು ನಿಂತರು. ಮಡಿ–ಮೈಲಿಗೆಯನ್ನು ವಿರೋಧಿಸಿದರು, ಮೂಢನಂಬಿಕೆಗಳನ್ನು ಅಲ್ಲಗಳೆದರು. ಮಠ–ಮಾನ್ಯಗಳಲ್ಲಿ ದೇವರ ಹೆಸರಿನಲ್ಲಿ–ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಮೌಢ್ಯತೆಗಳನ್ನು ಕಿತ್ತೊಗೆಯುವಂತೆ ಕರೆ ನೀಡಿದರು. ಮಡಿ ಯಾವುದಯ್ಯಾ?



ಮೈಲಿಗೆ ಯಾವುದಯ್ಯಾ? ತಿಳಿದು ನೋಡಿರಯ್ಯ ಎಂದು ತಿಳಿ ಹೇಳಿದರು. ಹೋಮ ಹವನಗಳಿಗೆ ಸುರಿವ ತುಪ್ಪಕ್ಕಿಂತ ಹಸಿದ ಹೊಟ್ಟೆಗಿಡುವ ಅನ್ನ ಮುಖ್ಯವಾದದ್ದೆಂದು ತಿಳಿಸಿ ಹೇಳಿದರು. ಗೋವಿನ ಪೂಜೆ ಮಾಡುವದಕ್ಕಿಂತ, ಹಾವಿಗೆ ಹಾಲನ್ನೆರೆವುದಕ್ಕಿಂತ, ಹಸಿದ ಜೀವಿಗಳಿಗೆ ಆಶನವೀಯಿರಯ್ಯ ಎಂದು ಸಾರಿ ಹೇಳಿದರು. ಹೀಗೆ ಮೌಢ್ಯತೆ–ಸಂಪ್ರದಾಯ ವಿರೋಧದ ಅನೇಕ ವಚನಗಳನ್ನು ಪುರಾಣಿಕರು ರಚಿಸಿದರು.

ಗೋವಿನ ಪೂಜೆ ಮಾಡುವದನ್ನು, ಹಾವಿಗೆ ಹಾಲೆರೆಯುವದನ್ನು, ಇರುವೆಗೆ ಸಕ್ಕರೆ ಹಾಕುವದನ್ನು, ಕಲ್ಲಿಗೆ ಎಡೆ ಹಿಡಿಯುವದನ್ನು, ಬೆಂಕಿಗೆ ತುಪ್ಪ ಸುರಿಯುವದನ್ನು ತೀವ್ರವಾಗಿ ಖಂಡಿಸಿರುವ ಪುರಾಣಿಕರು ಹಸಿದ ಜೀವಿಗಳಿಗೆ ಅನ್ನ ಹಾಕಬೇಕೆಂದು ಹೇಳಿದ್ದಾರೆ. ಮೌಢ್ಯತೆಯೆಂಬುದು ಈ ಜನಸಮುದಾಯದಲ್ಲಿ ಹೇಗೆ ಮನೆಮಾಡಿಕೊಂಡಿದೆಯೆಂಬುದನ್ನವರು ಹೀಗೆ ಹೇಳಿದ್ದಾರೆ.

> "ಹರನನ್ನೇ ತಿರುಕನನ್ನಾಗಿಸಿ ತಿರಿಕೆ ತಿನ್ನಿಸಿದವರು,
> ಹರಿಯನ್ನೇ ಹಂದಿಯಾಗಿಸಿ ನರಕ ತಿನ್ನಿಸಿದವರು
> ನರರಿಗೆ ನೆರವಾಗುವರೇನಯ್ಯ–
> ಸ್ವತಂತ್ರಧೀರ ಸಿದ್ಧೇಶ್ವರ?"

ಪುರೋಹಿತಶಾಹಿ ವ್ಯವಸ್ಥೆಯ ಕೈಗೊಂಬೆಯಾಗಿದ್ದ ಜನತೆಯ ಮೌಢ್ಯತೆಯನ್ನು, ಅವರ ಅಮಾಯಕತೆಯನ್ನು ಕಂಡು ಕವಿ ಮರುಗಿದ್ದಾರೆ. ಈ ಜನಸಾಮಾನ್ಯರ ಮನಪರಿವರ್ತನೆಯಾಗದ ಹೊರತು ಈ ಸಮಾಜ ಸುಧಾರಣೆಯಾಗುವದಿಲ್ಲವೆಂಬುದು ಪುರಾಣಿಕರ ಅಭಿಪ್ರಾಯವಾಗಿದೆ.

ಈ ದೇಶದಲ್ಲಿ ಕಲ್ಲಾಗಿ ಹುಟ್ಟಿದರೆ, ಒಂದಿಲ್ಲೊಂದು ಗುಡಿಯ ಮೂರ್ತಿಯನ್ನಾಗಿ ಮಾಡುತ್ತಾರೆ, ನೀರಾಗಿ ಹುಟ್ಟಿದರೆ, ಒಂದಿಲ್ಲೊಂದು ಶಂಖದಲ್ಲಿ ತೀರ್ಥವನ್ನಾಗಿ ಬಳಸುತ್ತಾರೆ, ಕತ್ತೆಯಾಗಿ ಹುಟ್ಟಿದರೆ ಒಂದಿಲ್ಲೊಂದು ದಿನ ಮುಖಂಡನನ್ನಾಗಿ ಮೆರೆಸುತ್ತಾರೆ. ಈ ದೇಶ ವ್ಯವಸ್ಥೆಯಲ್ಲಿ ಇನ್ನೇನಾದರು ಆಗಿ ಹುಟ್ಟಬಹುದು, ಸಜ್ಜನನಾಗಿ ಹುಟ್ಟಬಾರದಯ್ಯಾ –ಎಂದು ತಮ್ಮ

ವೇದನೆಯನ್ನು ಹೇಳಿದ್ದಾರೆ. ಒಬ್ಬ ಅಧಿಕಾರಿಯಾಗಿದ್ದು ಊರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿವಿಧ ಬಗೆಯ ಜನರನ್ನು ಪುರಾಣಿಕರು ಕಂಡಿದ್ದಾರೆ. ಮೌಢ್ಯತೆ- ಅಂಧಸಂಪ್ರದಾಯಗಳಿಗೆ ಬಲಿಯಾಗಿ ತಮ್ಮ ಬದುಕನ್ನೇ ವ್ಯರ್ಥಗೊಳಿಸಿಕೊಳ್ಳುತ್ತಿರುವವರ ಬಗೆಗೆ ಪುರಾಣಿಕರಿಗೆ ಅನುಕಂಪವಿದೆ.

**"ಇಲ್ಲಿ ಚತುರಂಗ ಬಲಕ್ಕಿಂತಲೂ**
**ಪಂಚಾಂಗ ಬಲ ಪ್ರಬಲವಾಗಿದ್ದಿತು ಹಿಂದೆ,**
**ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗಗಳೆಲ್ಲ**
**ಪಂಚಾಂಗಕ್ಕಧೀನವಯ್ಯ!"**

ಎಂದು ಸಮಾಜವ್ಯವಸ್ಥೆಯನ್ನು ನೇರವಾಗಿ ವಿಡಂಬಿಸಿದ ಪುರಾಣಿಕರು, ಪಂಚಾಂಗಕ್ಕೆ ಹೇಗೆ ಮೂರು ಅಂಗಗಳು ಅಧೀನವಾಗಿವೆಯೆಂಬುದನ್ನು ಪರಿಣಾಮಕಾರಿಯಾಗಿ ಹೇಳಿದ್ದಾರೆ. ಇಂತವರನ್ನು 'ಮಡಿ ಪಂಚೆಗಳ ಹರಡಿ, ಗುಡಿ ರಕ್ಷಿಸಿಕೊಳ್ಳಲು ಹೆಣಗಿದ ಹೆಡ್ಡರು" ಎಂದು ಮೂದಲಿಸಿದ್ದಾರೆ. ಮುಂದಾಗುವದನ್ನು ಇಂದೇ ಹೇಳುವೆನೆಂಬ ಭವಿಷ್ಯಕಾರನನ್ನು ಕುರಿತು ತರಾಟೆಗೆ ತೆಗೆದುಕೊಂಡಿದ್ದರೆ. ಅಕ್ಕಿ-ಬೇಳೆಗಾಗಿ ಕೈಚಾಚುವ ಇಂತಹ ಜ್ಯೋತಿಷ್ಯಗಾರರೇ ಈ ಜನಸಮುದಾಯವನ್ನು ತಪ್ಪುದಾರಿಗೆ ಕರೆದೊಯ್ಯುತ್ತಿದ್ದಾರೆಂಬುದು ಪುರಾಣಿಕರ ನೋವಾಗಿದೆ. ಕಣ್ಣಿದ್ದೂ ಕುರುಡರಂತಿರುವ, ಕಿವಿಯಿದ್ದೂ ಕಿವುಡರಾಗಿರುವ, ಬಾಯಿಯಿದ್ದೂ ಮೂಕರಂತಿರುವ, ಮೆದುಳಿದ್ದೂ ಮೂರ್ಖರಾಗಿರುವ, ಬದುಕಿದ್ದೂ ಸತ್ತಂತಿರುವವರೇ ಹೆಚ್ಚಾಗಿರುವಾಗ ಈ ದೇಶದಲ್ಲಿ ಕುರುಡು ನಂಬಿಕೆಗಳದೇ ರಾಜ್ಯವಾಗಿದೆ ಯೆಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಸುಳ್ಳುಗಳನ್ನು ಹೇಳಿ ಬದುಕುವ ವೇದಾಂತಿಗಳನ್ನು ಸಿದ್ಧಾಂತಿಗಳನ್ನು ತೀವ್ರವಾಗಿ ವಿಡಂಬಿಸಿರುವ ಪುರಾಣಿಕರು ಶರಣಸಿದ್ಧಾಂತಗಳಿಗೆ ಬದ್ಧರಾದವರಾಗಿದ್ದಾರೆ. ಬಸವಣ್ಣನವರ ನೇರ ಪ್ರಭಾವ ಪುರಾಣಿಕರ ಮೇಲಾಗಿರುವುದು ಕಂಡುಬರುತ್ತದೆ. ಪುರಾಣಿಕರು ಇಲ್ಲಿ ನೇರವಾಗಿ ಮತ್ತು ಸ್ಪಷ್ಟವಾಗಿ ಮೌಢ್ಯತೆ-ಸಂಪ್ರದಾಯಗಳ ಬಗೆಗೆ ಮಾತನಾಡಿದ್ದಾರೆ. ಹೀಗಾಗಿ ಅನೇಕ ಸಲ ಇವರ ವಚನಗಳಲ್ಲಿ ವಾಚ್ಯತೆ ಸಹಜವಾಗಿದೆ.



ಈ ದೇಶವ್ಯವಸ್ಥೆಯಲ್ಲಿ ಮೂಢನಂಬಿಕೆಗಳನ್ನು ಹರಡಲು ಪುರೋಹಿತ ಶಾಹಿ ಸಮುದಾಯ, ವ್ಯವಸ್ಥಿತವಾಗಿ ಸಂಚು ರೂಪಿಸಿದೆ. ದೇವರು-ಧರ್ಮ- ಆಧ್ಯಾತ್ಮದ ಶೀರ್ಷಿಕೆಗಳನಿಟ್ಟುಕೊಂಡು ಇವರು ಮೌಢ್ಯತೆ ಯೆಂಬ ಪ್ರಸಾದವನ್ನು ಹಂಚುತ್ತ ಹೊಗುತ್ತಾರೆ. ಹೀಗೆ ಶತಶತಮಾನಗಳಿಂದ ಪ್ರಸಾದ ರೂಪದಲ್ಲಿ ಬಂದದ್ದು ಜನತೆಗೆ ಪವಿತ್ರವಾಗಿ ಕಾಣಿಸಿದೆ. ಪಾವಿತ್ರ್ಯ- ಪಾತಿವ್ರತ್ಯದಂತಹ ಸಂಗತಿಗಳನ್ನು ಮೌಲ್ಯಗಳನ್ನಾಗಿಸಿ ಮಹಿಳೆಯರನ್ನು- ದಲಿತರನ್ನು ಶೋಷಣೆಗೈದ ಈ ಪುರೋಹಿತಶಾಹಿ ಮನಸ್ಸು ಇಂದು ಎಲ್ಲ ಜಾತಿ ಜನಾಂಗಗಳಲ್ಲಿ ಬೆಳೆದುನಿಂತಿದೆ. ಎಲ್ಲ ಜಾತಿ-ಜನಾಂಗಗಳಲ್ಲಿರುವ ಶೋಷಕರು ಪುರೊಹಿತಶಾಹಿಗಳಾಗಿದ್ದಾರೆ. ಇದನ್ನರಿಯದ ಮುಗ್ಧ ಜನತೆ ನಿತ್ಯವೂ ಮೋಸಹೋಗುತ್ತಲೇ ಇದ್ದಾರೆ. ಈ ಮೌಢ್ಯತೆಗಳೆಲ್ಲ ಅಳಿದು ಹೋದರೆ, ಎಲ್ಲರೂ ವಿಚಾರವಾದಿಗಳಾಗಿ ಬೆಳೆದರೆ ಈ ದೇಶದಲ್ಲಿ ಪುರೋಹಿತ ಶಾಹಿಗಳು ನಿರುದ್ಯೋಗಿಗಳಾಗಿ ಬಿಡುತ್ತಾರೆ. ಮದ್ದುಗುಂಡುಗಳನ್ನು ಮಾರಿ ಯುದ್ಧಕ್ಕೆ ಹಚ್ಚುವ ಕೆಲವು ದೂರ್ತರಂತೆ, ಜನಸಮುದಾಯದಲ್ಲಿ ಮೌಢ್ಯತೆಯನ್ನು ಬಿತ್ತಿ ಅವರ ಬದುಕನ್ನು ಹಾಳುಮಾಡುವ ದೂರ್ತರಿದ್ದಾರೆ. ಇದನ್ನು ಪುರಾಣಿಕರು ತಮ್ಮ ವಚನಗಳುದ್ದಕ್ಕೂ ಟೀಕಿಸುತ್ತಲೇ ಹೋಗಿದ್ದಾರೆ. ಇದನ್ನೇ ಅವರು ಹೀಗೆ ಹೇಳಿದ್ದಾರೆ.

**"ದೇಗುಲಗಳ ದಾರಿಯುದ್ದಕೂ**
**ಅಂಧಶ್ರದ್ಧೆಗಳ ಸೂರೆ,**
**ಮಠಗಳ ದಾರಿಯುದ್ದಕೂ**
**ಮೂಢ ವಿಶ್ವಾಸಗಳ ಸೂರೆ**
**ಕ್ಷೇತ್ರಗಳ ದಾರಿಯುದ್ದಕೂ**
**ಮಂಕುಬೂದಿಯ ಸೂರೆ...."**

ಹೀಗೆ ಈ ಮೂಢನಂಬಿಕೆ-ಅಂಧಸಂಪ್ರದಾಯಗಳನ್ನು ಕುರಿತು ಪುರಾಣಿಕರು ತಮ್ಮ ವಚನಗಳಲ್ಲಿ ವಿವರವಾಗಿ ಹೇಳಿದ್ದಾರೆ. ಪುರಾಣಿಕರು ಜಂಗಮ ಮನೆತನದಲ್ಲಿ ಹುಟ್ಟಿ, ಮಠವ್ಯವಸ್ಥೆಯಲ್ಲಿದ್ದು, ವೈಚಾರಿಕವಾಗಿ ಬೆಳೆದು ನಿಂತಿರುವುದು ಇಂದಿನ ಯುವಕರಿಗೆ ಆದರ್ಶವಾಗಿದೆ. ■

# ಸತಿ–ಪತಿ–ಭಾವ

ಸತಿ–ಪತಿ ಭಾವ ಹನ್ನೆರಡನೇ ಶತಮಾನದ ಶರಣರ ಮಹತ್ವದ ಪರಿಕಲ್ಪನೆ. ಲೌಕಿಕದ ಮೂಲಕ ಅಲೌಕಿಕವನ್ನು ಗುರುತಿಸುವ ಪ್ರಯತ್ನಗಳನ್ನವರು ಮಾಡಿದರು. ಇದೇ ಆದರ್ಶವನ್ನು ಒಪ್ಪಿಕೊಂಡ ಪುರಾಣಿಕರ ವಚನಗಳಲ್ಲಿ ಸತಿ–ಪತಿ–ಭಾವದ ಆಶಯವಿರುವ ಅನೇಕ ರಚನೆಗಳಿವೆ. ಪುರಾಣಿಕರು ಪ್ರೇಮ–ವಿರಹದ ಭಾವನೆಗಳನ್ನು ಈ ಸತಿಪತಿ ಭಾವದ ಚೌಕಟ್ಟಿನಲ್ಲಿಯೇ ವಿಸ್ತರಿಸಿದ್ದಾರೆ. ಸ್ವತಂತ್ರಧೀರ ಸಿದ್ಧೇಶ್ವರ ಈ ಕವಿಯ ಪ್ರಿಯಕರ. ಬಸವಣ್ಣನವರ ಸತಿ–ಪತಿ ಭಾವದ ವಚನಗಳ ನೇರ ಪ್ರಭಾವವನ್ನು ಇಲ್ಲಿ ಕಾಣಬಹುದಾಗಿದೆ.

"ನಲ್ಲಬರುವನೆಂಬ ಸಿಹಿಸುದ್ದಿ ಬಂದಿದೆ ಗೆಳತಿ ನಂಬಲೆ ನಂಬದಿರಲೆ?" ಎಂಬಂತಹ ಸಾಲುಗಳಲ್ಲಿರುವ ತೀವ್ರತೆ ಹಾಗೂ ಕುತೂಹಲ ಗಮನಿಸುವಂತಿವೆ. "ಯಾರಿಗಾಗಿ ಮಿಂದು ಮುಡಿಯಲಿ? ಯಾರಿಗಾಗಿ ಸಿರಿಗಂಧವನ್ನು ಸವರಿಕೊಳ್ಳಲಿ?" ಎಂಬಂತಹ ನುಡಿಗಳು ಅಕ್ಕಮಹಾದೇವಿಯ ರಚನೆಗಳನ್ನು ನೆನಪಿಸುತ್ತವೆ. ಪುರಾಣಿಕರ ಕಾವ್ಯದ ಅನನ್ಯತೆಯನ್ನು ಇಂತಹ ವಚನಗಳು ಹಿಡಿದಿಟ್ಟಿವೆ.

"ಶರಣ ಸತಿ" ಎನ್ನುವ ಪದ ಅರ್ಥಪೂರ್ಣವಾದುದು. ಶರಣನಾಗಬೇಕಾದರೆ ತಪಸ್ಸು ಮಾಡಬೇಕಾಗಿಲ್ಲ, ಉಪವಾಸ ಇರಬೇಕಾಗಿಲ್ಲ. ಶರಣನಾಗಬೇಕಾದರೆ ಮೊದಲು ಸತಿಯಾಗಬೇಕು. ಸತಿಯೆಂದರೆ ಹೆಣ್ಣು, ಹೆಣ್ಣೆಂದರೆ ತಾಯಿ, ತಾಯಿಯೆಂದರೆ ಅಂತಃಕರಣ. ಅಂದರೆ ಸಂಪೂರ್ಣ ಹೆಣ್ಣಾಗುವವರೆಗೆ; ಹಾಗೆಂದರೆ ಸಂಪೂರ್ಣ ಅಂತಃಕರಣಿಯಾಗುವವರೆಗೆ ಶರಣ ಪಟ್ಟ ಸಿಗಲಾರದು. ಹೆಣ್ಣನ್ನು–ಸತಿಯನ್ನು ಆಧ್ಯಾತ್ಮಕ್ಷೇತ್ರದಿಂದ ಅತಿದೂರ ಇಟ್ಟಂತಹ ಕಾಲದಲ್ಲಿ ಹನ್ನೆರಡನೆ ಶತಮಾನದ ಶರಣರು ಹೊಸ ಕ್ರಾಂತಿಕಾರಕವಾದ



ವಿಚಾರವನ್ನು ಮಂಡಿಸಿದರು. ಗಂಡಾಗಿ ಹುಟ್ಟಿದಾಗಲೇ ಮುಕ್ತಿಯೆಂದು ವೈದಿಕ ವ್ಯವಸ್ಥೆ ಸಾರಿದರೆ, ಸತಿಯಾದಾಗಲೇ ಶರಣನಾಗಲು ಸಾಧ್ಯವೆಂದು ಬಸವಣ್ಣನವರು ಪ್ರತಿಪಾದಿಸಿದರು. ಬಸವಣ್ಣನವರ ನೇರ ಪ್ರಭಾವಕ್ಕೊಳಗಾಗಿರುವ ಪುರಾಣಿಕರೂ ಕೂಡ ಇದೇ ಆಶಯವನ್ನು ತಮ್ಮ ವಚನಗಳಲ್ಲಿ ವಿಸ್ತರಿಸಿದ್ದಾರೆ. ಅವರ ಸತಿ–ಪತಿಭಾವದ ವಚನಗಳು ಗಮನಿಸುವಂತಿವೆ.

"ನಲ್ಲ ಬರುವನೆಂಬ ಸುದ್ದಿ ಬಂದಿದೆ ಗೆಳತಿ
ನಂಬಲೆ, ನಂಬದಿರಲೆ?
ಹೊರಗಿನಿಂದ ಬರುವನೆಂದರೆ ನಂಬಲಾರೆ
ಒಳಗೇ ಐತರುವನೆಂದರೆ ನಂಬದಿರಲಾರೆ!
ಮನದೊಳಗಣ ನಲ್ಲ
ಹೊರಗಿನಿಂದ ಬರುವನೆಂದರೆ
ಹೇಗೆ ನಂಬಲಿ ಸಖಿ?"

ಈ ವಚನದಲ್ಲಿ ಪುರಾಣಿಕರು ತಾವು ಸತಿಭಾವದಲ್ಲಿ ನಿಂತು, ದೇವರನ್ನು ಪತಿರೂಪದಲ್ಲಿ ಕಾಣುವ ಕಾತುರ ತುಂಬ ಕುತೂಹಲಕಾರಿಯಾಗಿದೆ. ನಲ್ಲಬರುವನೆಂಬ ಸುದ್ದಿ ಸಂಭ್ರಮದ ಮೂಲಕ ಪ್ರಾರಂಭವಾಗುತ್ತದೆ. ಆದರೆ ನಂಬುವುದ ಹೇಗೆ? ಎಂಬ ಪ್ರಶ್ನೆ ಬಂದಾಗ ಆತ್ಮಶೋಧನೆ ಪ್ರಾರಂಭವಾಗುತ್ತದೆ. "ಹೊರಗಿನಿಂದ ಬರುವನೆಂದರೆ ನಂಬಲಾರೆ" ಎಂಬ ನುಡಿ ತುಂಬ ಮುಖ್ಯವಾಗುತ್ತದೆ. ಪ್ರತಿಯೊಬ್ಬ ಶರಣನ ನಲ್ಲ ಅಥವಾ ದೇವರು ಆಮೂರ್ತರೂಪ. ಇಂತಹ ಅಮೂರ್ತರೂಪ ಹೊರಗಿನಿಂದ ಬರುವಂತಹದ್ದಲ್ಲ, ಒಳಗಡೆಯೇ ಬೆಳೆದು ನಿಲ್ಲುವಂತಹದ್ದು. ಇದನ್ನೇ ಮುಂದಿನ ಸಾಲು ದೃಢಪಡಿಸುತ್ತದೆ. ಮನದೊಳಗಣ ನಲ್ಲ ಒಳಗಡೆಯಿಂದಲೇ ಕಾಣಲು ಸಾಧ್ಯವೇ ಹೊರತು ಹೊರಗಿನಿಂದ ಬರುವನೆಂದರೆ ಹೇಗೆ ನಂಬುವುದು? ಎಂಬುದು ಎರಡನೇ ಪ್ರಶ್ನೆಯಾಗಿ ಕಾಡುತ್ತದೆ. ಆ ನಲ್ಲ ಒಳಗೇ ಎಚ್ಚರಿಸಿ ಬೆಳೆಯುತ್ತಾನೆಂಬ ಸಮಾಧಾನದ ಮೂಲಕ ವಚನ ಕೊನೆಗೊಳ್ಳುತ್ತದೆ.

ಇನ್ನೊಂದು ವಚನದಲ್ಲಿಯೂ ಕೂಡ ಇದೇ ಭಾವ ಬೆಳೆದು ನಿಂತಿದೆ. "ನಿನ್ನದಾರಿ ನೋಡಿ ನೋಡಿ ಕಣ್ಣು ನೋಯುತ್ತಿವೆ, ಹೊರಗನಾಲಿಸಿ ಕಿವಿ

ನೋಯುತ್ತಿವೆ" ಎಂದು ಪ್ರಾರಂಭವಾಗುವ ಆ ವಚನದಲ್ಲಿ ನಲ್ಲನ ಇರುವನ್ನು ಹೊರಗೆ ನೋಡಬೇಕಾಗಿಲ್ಲ, ಒಳಗೆ ಬೆಳೆಸಬೇಕೆಂಬ ಆಶಯ ವ್ಯಕ್ತವಾಗಿದೆ. "ಇನ್ನಾದರೂ ಒಲಿ, ನನ್ನೊಳಗೆ ನಲಿ" ಎಂಬ ಕೊನೆಯಸಾಲು ಇದನ್ನೇ ದೃಢಪಡಿಸುತ್ತದೆ.

ಪುರಾಣಿಕರ ಸತಿ-ಪತಿಭಾವದ ವಚನಗಳ ಮೇಲೆ ಮಹಾದೇವಿಯಕ್ಕನ ದಟ್ಟ ಪ್ರಭಾವವಿದೆ. ಸತಿ-ಪತಿಭಾವದ ಅಕ್ಕನ ವಚನಗಳು ತುಂಬ ಕಾವ್ಯಾತ್ಮಕ ವಾಗಿವೆ. ಪುರಾಣಿಕರ ಸತಿಪತಿಭಾವದ ವಚನಗಳೂ ಕೂಡ ಕಾವ್ಯಸಾಧ್ಯತೆ ಗಳನ್ನೊಳಗೊಂಡಿವೆ. ಮರಗದಂತೆ ಮೈಯೆಲ್ಲ ಪರಿಮಳ ನನ್ನ ನಲ್ಲನಿಗೆ, ಕಮಲದಂತೆ ತನುವೆಲ್ಲ ಗೌರವರ್ಣ ನನ್ನ ನಲ್ಲನಿಗೆ ಮಲ್ಲಿಗಕೆಯಂತೆ ಮಗಮಗಿದ ಮಂದಹಾಸ ನನ್ನ ನಲ್ಲನಿಗೆ" ಎಂದು ಹೇಳುವ ಪುರಾಣಿಕರು ನಲ್ಲನಿಗೆ ಮುತ್ತು ಕೊಡುವ ಅಪ್ಪಿಕೊಳ್ಳುವ ಆಶಯಗಳನ್ನು ಪ್ರಕೃತಿ ಮೂಲಕ ಸಮೀಕರಿಸಿ ಹೇಳಿದ್ದಾರೆ.

"ಮುಗಿಲು ನೆಲವನ್ನು ಮುದ್ದಿಸಿತೋ  
ನೆಲವು ಮುಗಿಲನ್ನು ಮುದ್ದಿಸಿತೊ?  
ಮೋಡ ಗಿರಿಯನ್ನು ಮುದ್ದಿಸಿತೋ  
ಗಿರಿ ಮೋಡವನ್ನು ಮುದ್ದಿಸಿತೊ?  
ಮೆಲ್ಲೆಲರು ಮೊಗ್ಗನ್ನು ಮುದ್ದಿಸಿತೋ  
ಮೊಗ್ಗು ಮೆಲ್ಲೆಲರನ್ನು ಮುದ್ದಿಸಿತೋ?  
ನಾನು ನಿನ್ನನ್ನು ಮುದ್ದಿಸಿದೆನೋ  
ನೀನು ನನ್ನನ್ನು ಮುದ್ದಿಸಿದೆಯೋ?....  
ಮುದ್ದಿನಲಿ ಇಬ್ಬರ ಭಾವೈಕ್ಯ, ಜೀವೈಕ್ಯ  
ಸ್ವತಂತ್ರಧೀರ ಸಿದ್ಧೇಶ್ವರಾ!"

ಈ ವಚನದಲ್ಲಿ ನಡೆವ ಮುದ್ದಿಸುವ ಕ್ರಿಯೆ, ಆಪ್ತವಾಗುವ ತವಕ, ಕೂಡಿಕೊಳ್ಳುವ ತೀವ್ರತೆ ಪ್ರಕೃತಿಯ ಸಾಧ್ಯತೆಗಳ ಮೂಲಕ ಸಾಧ್ಯವಾಗಿದೆ. ಮುಗಿಲು-ನೆಲ, ಮೋಡ-ಗಿರಿ, ಮೆಲ್ಲೆಲರು-ಮೊಗ್ಗು ಇವು ಜೋಡಿಯಾಗಿ ಕೂಡುವ, ಮುದ್ದಿಸುವ ಪ್ರಕ್ರಿಯೆಯಲ್ಲಿ "ನಾನು-ನೀನು" ಸೇರಿಕೊಳ್ಳುತ್ತದೆ. ಹೀಗಾಗಿ ಇಲ್ಲಿ ಪ್ರಕೃತಿ ಸತಿಯಾಗಿ, ಸೃಷ್ಟಿಕರ್ತ ಪತಿಯಾಗಿ ಕಾಣಿಸಿ



ಕೊಂಡಿದ್ದಾನೆ. ಪ್ರಕೃತಿ-ಪುರುಷ ಹಾಗೂ ಸತಿ-ಪತಿಗಳ ಸಂಬಂಧದ ಸಮನ್ವಯವನ್ನು ಇಲ್ಲಿ ಕಾಣಬಹುದಾಗಿದೆ.

ದಾಂಪತ್ಯ ಜೀವನದಲ್ಲಿ ಸತಿಗೆ ಪತಿ, ಪತಿಗೆ ಸತಿ ಮುನಿಸಿಕೊಳ್ಳುವುದು ಸಾಮಾನ್ಯ. ಇದೇ ಲೌಕಿಕ ಭಾವನೆಗಳನ್ನು ಪುರಾಣಿಕರು ಆಧ್ಯಾತ್ಮ ಕ್ಷೇತ್ರದಲ್ಲೂ ತಂದಿದ್ದಾರೆ. ತಾವು ಸತಿಯಾಗಿ ಮಿಂದು ಮುಡಿಯುವುದು, ಸಿರಿಗಂಧ ಹಚ್ಚಿಕೊಳ್ಳುವುದು, ಸಿಂಗಾರ ಮಾಡಿಕೊಳ್ಳುವುದು ಯಾರಿಗಾಗಿ? ಎಂದು ಪ್ರಶ್ನಿಸುತ್ತಾರೆ. ಸ್ವತಂತ್ರಧೀರ ಸಿದ್ಧೇಶ್ವರನೇ ಮುನಿದು ಹೋದ ಮೇಲೆ ಯಾರಿಗಾಗಿ ಬದುಕಿರಲಿ ಗೆಳತಿ? ಎಂದು ಕೇಳುತ್ತಾರೆ. ಇಲ್ಲಿಯ ಮುನಿಸು ಕೂಡುವಿಕೆಯ ತೀವ್ರತೆಯಾಗಿ ಕಾಡುತ್ತದೆ. ಮುನಿದುಹೋದ ನಲ್ಲನ ನೆನಪಾದಾಗಲೆಲ್ಲ ಉಂಟಾಗುವ ತೀವ್ರ ಭಾವನೆಗಳನ್ನು ಕವಿ ಇಲ್ಲಿ ಆಧ್ಯಾತ್ಮಿಕ ಪರಿಭಾಷೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಈ ಮುನಿಸು ಹೆಚ್ಚಾದಂತೆ ಸತಿಯ ಭಾವತೀವ್ರತೆಯೂ ಹೆಚ್ಚಾಗುತ್ತ ಹೋಗುತ್ತದೆ. ಇನ್ನು ನನ್ನ ಕನಸಿನಲ್ಲಿಯೂ ಬರಬೇಡ ನೀನು! ಉರಿವ ಗಾಯಕ್ಕೆ ಉಪ್ಪೆರಚಬೇಡ, ಗಾಯದ ಮೇಲೆ ಬರೆಯ ಎಳೆಯಬೇಡವೆಂದು ಆ ಜೀವ ಖಡಾಖಂಡಿತವಾಗಿ ನುಡಿಯುತ್ತದೆ. ಹಾಗೆ ನಿಷೇಧ ಹೇರಿದ ಮೇಲೆ ಮನಸ್ಸು ನೆಮ್ಮದಿಗೊಳ್ಳುವುದಿಲ್ಲ, ಬದಲಾಗಿ ತೀವ್ರತೆ ಹೆಚ್ಚಾಗುತ್ತದೆ. ಆಗ ಸತಿ ಒಳಗೆ ಸೋಲುತ್ತಾಳೆ. ಆ ಸೋಲಿನಲ್ಲಿಯೇ ಗೆಲುವನ್ನು ಸಾಧಿಸುತ್ತಾಳೆ. ನನ್ನನ್ನು ಬಿಟ್ಟಿರಲು ನಿನಗೂ ಕಷ್ಟವೆನಿಸಿದರೆ ನಿಜವಾಗಿ ಬಾ ಎಂದು ಕರೆ ಕೊಡುತ್ತಾಳೆ. ಇಲ್ಲಿಯ ಕರೆಯಲ್ಲಿ ಒತ್ತಾಯವಿಲ್ಲ, ಪ್ರೀತಿಯಿದೆ; ಕೇವಲ ಆಕರ್ಷಣೆಯಿಲ್ಲ ಅರ್ಪಣೆಯಿದೆ.

ದಾಂಪತ್ಯದ ಇಂತಹ ಮಧುರ ಭಾವನೆಗಳ ಮೂಲಕ ಕಾವ್ಯಾನಂದರು ಆಧ್ಯಾತ್ಮದೆತ್ತರವನ್ನು ತಲುಪುವ ಸ್ಥಿತಿ ಕುತೂಹಲಕಾರಿಯಾಗಿದೆ. ನಲ್ಲನೆಂಬ ದೇವರು ಒಲಿದು ಬಂದಾಗ ಬಿರಿವ ಮುಗುಳುಗಳಲ್ಲಿಯೂ ಪಿಸುಮಾತುಗಳು ಕೇಳಿಸುತ್ತವೆ. ಹಕ್ಕಿ ಕೂಜನಗಳಲ್ಲಿಯೂ ಸವಿಮಾತು ಕೇಳಿಸುತ್ತವೆ. ಇಂತಹ ಅನೇಕ ಭಾವ ತೀವ್ರತೆಗಳನ್ನು ಅವರ ಸತಿ-ಪತಿ ಭಾವದ ವಚನಗಳಲ್ಲಿ ಕಾಣಬಹುದಾಗಿದೆ.

■

# ಪ್ರೀತಿಯ ಅನಂತತೆ

"ಪ್ರೀತಿ" ಅನಂತವಾದುದು; ಅದರ ಸಾಧ್ಯತೆಗಳನ್ನು ಗುರುತಿಸುವಲ್ಲಿ ಪುರಾಣಿಕರು ಯಶಸ್ವಿಯಾಗಿದ್ದಾರೆ. ಪ್ರೀತಿಯೆಂಬುದು ನಲ್ಲ-ನಲ್ಲೆಯರ, ಪ್ರಿಯಕರ-ಪ್ರೇಯಸಿಯರ ವಿಷಯಕ್ಕೆ ತಿರುಗಿದಾಗ, ಪ್ರಣಯವಾಗುತ್ತದೆ. ಅದೇ ಜೀವ-ದೇವರ ಸಂಬಂಧದಲ್ಲಿ ಅದು ಭಕ್ತಿಯಾಗುತ್ತದೆ. ಪುರಾಣಿಕರ ಪ್ರೀತಿಯ ಪರಿಕಲ್ಪನೆಯು ಪ್ರಣಯಕ್ಕೂ ಸಂಬಂಧಿಸಿದ್ದಲ್ಲ, ಭಕ್ತಿಗೂ ಸಂಬಂಧಿಸಿದ್ದಲ್ಲ. ಅವರ ಪ್ರೀತಿ ಸಮಾಜಕ್ಕೆ ಸಂಬಂಧಿಸಿದ್ದು, ಮಾನವೀಯತೆಯ ಬೆಳವಣಿಗೆಗೆ ಸಂಬಂಧಿಸಿದ್ದು, ಅದು ಅಂತಃಕರಣಕ್ಕೆ ಸಂಬಂಧಿಸಿದ್ದು. ಅಂತೆಯೇ ಪುರಾಣಿಕರ ಪ್ರೀತಿಯ ಪರಿಕಲ್ಪನೆ ಅನಂತವಾಗಿದೆ ಅದು ಅನನ್ಯವಾಗಿದೆ.

ಪ್ರೀತಿ ಮತ್ತು ನೀತಿಯನ್ನು ಅವರು ಕಸಿಮಾಡಿ ಕಟ್ಟುತ್ತಾರೆ, ಅವರ ದೃಷ್ಟಿಯಲ್ಲಿ ಈ ನಾಲ್ಕಾಕ್ಷರಗಳು "ಚತುರಕ್ಷರೀ ಮಂತ್ರ"ವಾಗಿ ಕಾಣಿಸುತ್ತವೆ. ನೀತಿಯೆಂಬುದು ನಿಯಮಗಳ ಭಾರದಿಂದ, ಅವಾಸ್ತವಗಳ ಅಸಹಜತೆಯಿಂದ ಕೂಡಿರಬಾರದು, ಅದು ಪ್ರೀತಿಯ ರಸದಲ್ಲಿ ಬೆಳೆದು ನಿಲ್ಲಬೇಕೆಂದವರು ಹೇಳುತ್ತಾರೆ. "ಪ್ರೀತಿಸುವ ಹೃದಯವೊಂದಿದ್ದರೆ ಎಲ್ಲ ಇದ್ದ ಹಾಗೆ, ಅದಿಲ್ಲದಿರೆ ಎಲ್ಲ ಇದ್ದೂ ಇಲ್ಲದಂತಯ್ಯಾ!" ಎಂಬ ಅವರ ವಚನಗಳ ಸಾಲುಗಳಲ್ಲಿ ಪ್ರೀತಿಯ ಮಹತ್ವವೆಂತಹದೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಪ್ರೀತಿ ಬಹುಮುಖಿ ಯಾದುದು, ಅದೊಂದು ಮಹತ್ವದ ಮೌಲ್ಯ. ಆ ಮೌಲ್ಯ ಬೆಳೆದಂತೆಲ್ಲ ಸಮಾಜ ಬೆಳೆಯುತ್ತದೆ. ಮಾತಿನ ಶಕ್ತಿ-ನೀತಿಯ ಶಕ್ತಿ ಎಲ್ಲ ಶಕ್ತಿಗಳಿಗಿಂತ ಪ್ರೀತಿಯಶಕ್ತಿ ದೊಡ್ಡದು.

ಪ್ರೀತಿಸುವವರನ್ನು ಪ್ರೀತಿಸುವವ ಮಾನವ, ಪ್ರೀತಿಸದವರನ್ನೂ ಪ್ರೀತಿಸುವವ ಮಹಾಮಾನವ, ದ್ವೇಷಿಸುವವರನ್ನೂ ಪ್ರೀತಿಸುವವ ದೇವ



ಮಾನವ ನೋಡಯ್ಯ! ಎಂದು ಹೇಳುವ ಪುರಾಣಿಕರ ವಚನಗಳಲ್ಲಿ ಪ್ರೀತಿಯ ಆಳ-ಅಗಲ-ವಿಸ್ತಾರಗಳು ಸ್ಪಷ್ಟವಾಗುತ್ತವೆ. ಪ್ರೀತಿ ವಿಷಯದ ಅನಂತ ಸಾಧ್ಯತೆಗಳನ್ನು ಅವರು ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ. ಪ್ರಣಯ-ಪ್ರೇಮಗಳಿಗಿಂತ ಭಿನ್ನವಾದ ಸಾಧ್ಯತೆಗಳನ್ನು ಅವರು ತಮ್ಮ 'ಪ್ರಿತಿಯ' ಹೊಸ ಪರಿಕಲ್ಪನೆಗಳನ್ನಾಗಿ ಕಟ್ಟಿಕೊಂಡಿದ್ದಾರೆ.

> "ಸಿರಿಯ ಸರಿ ಹಸುಗೆ, ಹೃದಯ ಹೃದಯಗಳ ಬೆಸುಗೆ
> ಬರಲಯ್ಯಾ ಭುವನಕ್ಕೆ ಒಲವಿನೊಸಗೆ!
> ಕಳೆದು ಹೋದ ವಿಶ್ವಾಸ, ನೈಜ ಮನುಜತೆಯ ನಿಶ್ವಾಸ
> ಮರಳಲಯ್ಯಾ ಮನುಕುಲಕ್ಕೆ ನಂಬಿಕೆಯ ಉಲ್ಲಾಸ!...."

ಇದು ಕಾವ್ಯಾನಂದರ ಪ್ರೀತಿಯ ಸಾರ. ಹೃದಯ ಹೃದಯಗಳಲ್ಲಿ ಒಲವು ತುಂಬಿರಬೇಕೆಂಬುದು ಅವರ ಕಳಕಳಿ. ಪ್ರೀತಿ-ವಿಶ್ವಾಸಗಳಿಂದ ಮಾತ್ರ ಮನುಜ ಕುಲ ಬದುಕಬಲ್ಲದೆಂದು ಕವಿ ಹೇಳುತ್ತಾರೆ. ಮನೆಯಲ್ಲಿ ಸ್ಥಳ ಕೊಡುವುದಕ್ಕಿಂತ, ಮನದಲ್ಲಿ ಸ್ಥಳಕೊಡುವುದು ಬಹುಮುಖ್ಯವೆಂಬುದು ಅವರ ವಾದ. ದೇಹವೇ ದೇಗುಲವಾಗಬೇಕೆಂಬುದು ಅವರ ಬಯಕೆ.

ಜಾತೀಯತೆಯೆಂಬದು ಭೂತಗನ್ನಡಿಯಾಗಿದೆ. ಅದರಲ್ಲೀಗ ಎಲ್ಲರೂ ವಿಕಾರವಾಗಿ ಕಾಣುತ್ತಿದ್ದಾರೆ. ಈ ಕರಾಳ ಕನ್ನಡಿಯನ್ನು ಒಡೆದುಹಾಕಿ ಪ್ರೀತಿ ಕನ್ನಡಿಯನ್ನು ನಿಲ್ಲಿಸಬೇಕೆಂದವರು ತಮ್ಮ ವಚನವೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ. ಜಾತಿಕನ್ನಡಿಯನ್ನು ನಿರಾಕರಿಸುತ್ತಲೇ ಪ್ರೀತಿ ಕನ್ನಡಿಯನ್ನು ಸ್ವಾಗತಿಸುವ ಕಾವ್ಯಾನಂದರ ಪ್ರೀತಿಯ ಆಶಯ ಸಮಾಜಮುಖಿಯಾದುದಾಗಿದೆ. ಪ್ರೀತಿ ಯೆಂಬುದು ಕೇವಲ ಗಂಡು-ಹೆಣ್ಣು, ದೇವ-ಭಕ್ತರಿಗೆ ಮಾತ್ರ ಮೀಸಲಾಗಿರದೆ, ಅದು ಜನತೆ-ಸಮಾಜದ ನಡುವೆ ಹಬ್ಬುವ ಬಳ್ಳಿಯಾಗಬೇಕೆಂಬುದು ಅವರ ಉದ್ದೇಶವಾಗಿದೆ. ಆದುದರಿಂದ ಅವರು ಜನತೆಯಲ್ಲಿ ದೇವರನ್ನು ಕಾಣುತ್ತಾರೆ. ಆಧ್ಯಾತ್ಮದ ಅಂತಿಮ ಗುರಿ ದೇವನನ್ನು ಕಾಣುವುದು, ಮೋಕ್ಷವನ್ನು ಪಡೆಯುವದಾದರೆ, ಕಾವ್ಯಾನಂದರ ಮುಖ್ಯ ಗುರಿ ಜನ ಸಮುದಾಯದಲ್ಲಿ ಬೆರೆಯುವುದು, ಅಲ್ಲಿ ಪ್ರೀತಿಯ ಅಲೆಯಲ್ಲಿ ತೇಲುವುದು ಆಗಿದೆ. ಹೀಗಾಗಿ ಇಲ್ಲಿಯ "ಪ್ರೀತಿ" ಹೊಸ ಅರ್ಥವನ್ನು ಪಡೆದುಕೊಳ್ಳುತ್ತದೆ.

**"ನಿನ್ನನ್ನು ಬೆರೆವ ಪರಿ ತಿಳಿಸುವ**
**ಆಧ್ಯಾತ್ಮ ವಿದ್ಯೆಗಿಂತ**
**ನಿನ್ನವರ ಬೆರೆಯಲು ಕಲಿಸುವ**
**ಜೀವನ ಕಲೆ ಪ್ರಿಯವಯ್ಯ ನನಗೆ;**
**ನಿನ್ನ ಗುಣಗಾನ ಕಲಿಸುವ**
**ಮತ ಸಂಹಿತೆಗಳಿಗಿಂತ**
**ನಿನ್ನವರ ಗುಣ ಗ್ರಹಣ ಕಲಿಸುವ**
**ಸ್ನೇಹ ಸಂಹಿತೆ ಪ್ರಿಯವಯ್ಯ ನನಗೆ;"**

ಇಂತಹ ವಚನಗಳನ್ನು ಗಮನಿಸಿದಾಗ ಕವಿಯ ಪ್ರೀತಿಯ ಅರ್ಥಸಾಧ್ಯತೆ ಸ್ಪಷ್ಟವಾಗುತ್ತದೆ. ಸತಿಪತಿಭಾವದ ವಚನಗಳಲ್ಲಿ ಪತಿಯನ್ನು ಕೂಡುವ ಸತಿಯ ಕಾತರದಲ್ಲಿ ದೇವನನ್ನು ಸೇರುವ ಭಕ್ತನ ತೀವ್ರತೆ ಕಂಡುಬಂದರೆ, ಅವರ ಪ್ರೀತಿಯ ಅನನ್ಯತೆಯನ್ನು ಸಾರುವ ಇಂತಹ ವಚನಗಳಲ್ಲಿ, ಆಧ್ಯಾತ್ಮ ವಿದ್ಯೆಗಿಂತ ಜೀವನ ಪ್ರೀತಿ ದೊಡ್ಡದೆಂದು ಹೇಳಲಾಗಿದೆ. ದೇವರ ಗುಣಗಾನ ಕಲಿಸುವ ಮತ ಸಂಹಿತೆಗಳಿಗಿಂತ ಜನಸಮುದಾಯದ ಸ್ನೇಹ ಸಂಹಿತೆ ಪ್ರಿಯವೆಂದು ಹೇಳುವ ಅವರ ನುಡಿ ಬಹುಮುಖ್ಯವಾದುದಾಗಿದೆ.

ಹರಿಯುವುದು ಜಲದ ಲಕ್ಷಣ, ಉರಿಯುವುದು ಬೆಂಕಿಯ ಲಕ್ಷಣ, ಸುರಿಯುವುದು ಮುಗಿಲಿನ ಲಕ್ಷಣ, ಬೀಸುವುದು ಗಾಳಿಯ ಲಕ್ಷಣ ಹೇಗೊ, ಹಾಗೆ ಒಲಿಸುವುದು-ಒಲಿಯುವುದು ಒಲವಿನಲ್ಲಿಯೇ ಪೂರ್ಣತೆಯನ್ನು ಕಂಡುಕೊಳ್ಳುವುದು, ಒಲವೇ ಜೀವನ ಸಾಕ್ಷಾತ್ಕಾರವೆಂದು ನಂಬುವುದು ಮನುಷ್ಯರ ಲಕ್ಷಣವಾಗಬೇಕೆಂದು ಕವಿ ಮತ್ತೊಂದು ವಚನದಲ್ಲಿ ವಿವರಿಸಿದ್ದಾರೆ. ಪ್ರಕೃತಿಯಲ್ಲಿರುವ ಪ್ರತಿಯೊಂದು ವಸ್ತುವಿಗೂ ಅದರದೇ ಆದ ಲಕ್ಷಣಗಳಿರುವಂತೆ, ಮನುಜನಿಗೆ ಒಲವೇ ಪ್ರಮುಖ ಲಕ್ಷಣವಾಗಬೇಕೆಂಬುದು ಅವರ ಆಶಯವಾಗಿದೆ.

"ಕಿವಿಗೆ ಹಿತ ಪ್ರೀತಿಸುವವರ ಸ್ವರ, ಕಣ್ಣಿಗೆ ಹಿತ ಪ್ರೀತಿಸುವವರ ಮುಖ" ಎಂದು ಪ್ರಾರಂಭವಾಗುವ ವಚನದಲ್ಲಿ ಪ್ರೀತಿಯ ವಿಸ್ತಾರವನ್ನು



ಕಾಣಬಹುದಾಗಿದೆ. ಪಂಚೇಂದ್ರಿಯಗಳಲ್ಲಿ ಒಲವು ತುಂಬಿದಾಗ ಅವುಗಳ ಸಾರ್ಥಕತೆ ಕಾಣಿಸುತ್ತದೆ. ಅವುಗಳಲ್ಲಿ ಸ್ವಾರ್ಥ-ದ್ವೇಷ-ಕಾಮ-ವಿಕಾರಗಳು ತುಂಬಿದಾಗ ಬದುಕೇ ಹಾಳಾಗಿ ಹೋಗುತ್ತದೆ.

**"ಪೂಜಿಸಿಯೇ ಪಡೆಯಬೇಕಿಲ್ಲ ಶಿವಸನ್ನಿಧಿಯನ್ನು**
**ಪ್ರೀತಿಸಿಯೂ ಪಡೆಯಬಹುದು ಅದನ್ನು"**

ಕಾವ್ಯಾನಂದರ ವಚನದ ಈ ಸಾಲುಗಳು ಪೂಜೆಗಿಂತ ಪ್ರೀತಿ ದೊಡ್ಡದೆಂದು ಸಾರುತ್ತವೆ. ಪೂಜೆಯಲ್ಲಿ ಕೀಳರಿಮೆ ಕಾಣಿಸಿದರೆ ಪ್ರೀತಿಯಲ್ಲಿ ಸಮಾನತೆ-ಕಾಣಿಸುತ್ತದೆ. ಶಿವಸನ್ನಿಧಿಯನ್ನು ಪೂಜೆಯಿಂದ ಪಡೆಯುವುದ ಕ್ಕಿಂತ ಪ್ರೀತಿಯಿಂದ ಪಡೆಯಬಹುದೆಂದು ಹೇಳುವಲ್ಲಿ ಕವಿಯಲ್ಲಿರುವ ಸಮಾನತೆಯ ಆಶಯ ಕಾಣಿಸುತ್ತದೆ.

ದೇಶಕ್ಕೆ ಗಡಿ-ಗೆರೆಗಳಿರಬಹುದು ಆದರೆ ಪ್ರೀತಿಗೆ ಗಡಿ-ಗೆರೆಗಳು ಇರಬಾರದೆಂದು ಕವಿ ಕರೆ ಕೊಡುತ್ತಾರೆ. "ನೆಲ-ಜಲ-ಮುಗಿಲುಗಳು ವಿಭಕ್ತವಾದರೂ ಮನುಜ ಕುಲ ವಿಭಕ್ತವಾಗದಿ ರಲಯ್ಯಾ" ಎಂದು ಕೇಳಿಕೊಳ್ಳುವ ಕವಿಯ ಕೋರಿಕೆಯಲ್ಲಿ ಮನುಜಕುಲದ ಬಗೆಗಿರುವ ಗಾಢಪ್ರೇಮ ಎದ್ದು ಕಾಣುತ್ತದೆ. ಹೀಗೆ ಕಾವ್ಯಾನಂದರು ತಮ್ಮ ವಚನಗಳಲ್ಲಿ ಪ್ರೀತಿಯ ಹೊಸ ಸಾಧ್ಯತೆಗಳನ್ನು ಕಂಡುಕೊಂಡಿದ್ದಾರೆ. ಪೂಜೆ-ಆರಾಧನೆಗಳಿಗಿಂತ ಪ್ರೀತಿ-ವಾತ್ಸಲ್ಯಗಳು ದೊಡ್ಡವೆಂದು ಹೇಳುವ ಕವಿವಾಣಿ ಇಂದಿಗೂ ಪ್ರಸ್ತುತವಾಗಿದೆ. ■

# ಮಹಿಳೆ

'ಮಹಿಳೆ'ಯನ್ನು ಕುರಿತು ಅನೇಕ ವ್ಯಾಖ್ಯಾನಗಳಿವೆ. ಮಹಿಳೆಯನ್ನು ದೇವತೆಯೆಂದು ಪೂಜಿಸಿದವರಿದ್ದಾರೆ. ರಾಕ್ಷಸಿಯೆಂದು ದ್ವೇಷಿಸಿದವರಿದ್ದಾರೆ. ಹೆಣ್ಣು ಮಾಯೆ, ಅದು ಮೋಹ ಎಂದು ದೂರಸರಿದವರಿದ್ದಾರೆ; ಹೆಣ್ಣು ತಾಯಿ, ಆಕೆ ಜೀವಕೊಟ್ಟವಳೆಂದು ಸಮೀಪ ಹೋದವರಿದ್ದಾರೆ. ಎಲ್ಲಿ ಹೆಣ್ಣನ್ನು ಪೂಜಿಸುತ್ತಾರೊ, ಅಲ್ಲಿ ದೇವತೆಗಳು ನೆಲೆಸಿರುತ್ತಾರೆಂದು ಹೇಳಿದವರೇ "ನಸ್ತ್ರೀ ಸ್ವಾತಂತ್ರಮರ್ಹತಿ" ಎಂದು ಆದೇಶ ಹೊರಡಿಸಿದವರೂ ಇದ್ದಾರೆ. ಆದರೆ ಶರಣರು ಹೆಣ್ಣಿನ ಬಗೆಗೆ ಮಹಿಳೆಯ ಬಗೆಗೆ ತಾಳಿದ್ದ ನಿಲುವು ಹೆಚ್ಚು ವೈಜ್ಞಾನಿಕವಾಗಿದೆ, ಮಾನವೀಯತೆಯಿಂದ ಕೂಡಿದೆ. ಶರಣರ ಪ್ರಭಾವಕ್ಕೊಳಗಾಗಿರುವ ಸಿದ್ಧಯ್ಯ ಪುರಾಣಿಕರು ಮಹಿಳೆಯ ಬಗೆಗೆ ಅಪಾರ ಗೌರವ ಹೊಂದಿದವರಾಗಿದ್ದಾರೆ.

"ಹೆಣ್ಣು ಸಹನೆಯಲ್ಲಿ ಪೃಥ್ವಿ, ಕ್ಷಮೆಯಲ್ಲಿ ಜಲ, ಕರುಣೆಯಲ್ಲಿ ಆಕಾಶ" ಎಂದು ಹೆಣ್ಣನ್ನು ವರ್ಣನಾತ್ಮಕ ರೀತಿಯಲ್ಲಿ ವ್ಯಾಖ್ಯಾನಿಸಿದ ಪುರಾಣಿಕರು, 'ಸತಿ' ತಪ್ಪಿದರೂ ಚಿತೆ ತಪ್ಪಲಿಲ್ಲ, ಈ ದೇಶದ ಸತಿಗೆ! ಎಂದು ಕಟುವಾಸ್ತವವನ್ನು ಬಿಚ್ಚಿಟ್ಟಿದ್ದಾರೆ. ಪುರಾಣಿಕರು ಹೆಣ್ಣಿನ ಬಗೆಗೆ ಪರ-ವಿರೋಧ ಭಾವನೆಗಳನ್ನು ವ್ಯಕ್ತಪಡಿಸುವುದಿಲ್ಲ. ಸಮಾಜ ವ್ಯವಸ್ಥೆಯಲ್ಲಿ ಅವಳ ಅಸ್ತಿತ್ವವೆಂತಹದೆಂಬುದನ್ನು ತಿಳಿಸುತ್ತ ಹೋಗುತ್ತಾರೆ.

ತಾಯಿ ದೇವರೆಂದು ನಮಿಸುವ ಗಂಡಸರೇ, ಸತಿ, ಶೂದ್ರಳೆನ್ನುತ್ತಾರೆ. ಹೆಣ್ಣು ಮಾಯೆಯೆನ್ನುವವರು, ಹೆಣ್ಣಿನ ಹೊಟ್ಟೆಯಲ್ಲಿ ಹುಟ್ಟುವುದಿಲ್ಲವೆ? ಎಂದು ಪುರಾಣಿಕರು ಪ್ರಶ್ನಿಸಿದ್ದಾರೆ. ಹೆಣ್ಣಿನ ಮಹಿಮೆಯನ್ನು, ಅವಳ ಸಾಧ್ಯತೆಗಳನ್ನು ಗಂಡು ಅರ್ಥಮಾಡಿಕೊಳ್ಳಬೇಕು, ಸಾಂಪ್ರದಾಯಿಕ ಸಂಕೋಲೆಗಳಿಂದ ಅವಳ ವಿಮೋಚನೆಯಾಗಬೇಕು, ಮಹಿಳೆಯೂ ಕೂಡ ಪುರುಷನಿಗೆ ಸಮಸಾಟಿಯಾಗಿ ಬೆಳೆದು ನಿಲ್ಲಬೇಕೆಂದು ಪುರಾಣಿಕರು ಬಯಸುತ್ತಾರೆ. ಹೆಣ್ಣಿನ ಈ ಅಸಮಾನತೆಗೆ, ಅವಳ ಶೋಷಣೆಗೆ ಕಾರಣವಾದ ಸಮಾಜವ್ಯವಸ್ಥೆಯ ಬಗೆಗೆ ಪುರಾಣಿಕರಲ್ಲಿ ಸಿಟ್ಟಿಲ್ಲ. ಹೀಗಾಗಿ ಅದು ಬಂಡಾಯದ ರೂಪ ಪಡೆಯುವುದಿಲ್ಲ. ಹೆಣ್ಣಿನ ಬಗೆಗೆ ಅವರಲ್ಲಿ ಅಪಾರ ಅಂತಃಕರಣ ವಿರುವುದರಿಂದ ಅವರು ಮಹಿಳೆಯನ್ನು ಕುರಿತು ಹೇಳಿರುವ ಮಾತುಗಳು ಗಮನಾರ್ಹವೆನಿಸುತ್ತವೆ.

"ನಿನ್ನಿಂದ ಕಳೆ ಗಂಡಿನ ಬಾಳಿಗೆ! ನೀನೇ ಮಧುರ ಮಳೆ ಬದುಕಿನ ಬೆಳೆಗೆ!" ಎನ್ನುವ ವಚನದಲ್ಲಿ ಹೆಣ್ಣಿನ ಬಗೆಗೆ ಇರುವ ಅವರ ಧೋರಣೆ ಸ್ಪಷ್ಟವಾಗುತ್ತದೆ. ಬಾಳಿಗೆ ಕಳೆ ತರುವವಳು, ಬಾಳನ್ನು ಸುಂದರವಾಗಿಸುವವಳು ಹೆಣ್ಣು; ಬದುಕೆಂಬ ಬೆಳೆಗೆ ಮಳೆಯಾಗಿ ಸುರಿವವಳು ಹೆಣ್ಣು ಎಂದವರು ಹೇಳಿದ್ದಾರೆ.

> **"ಹೆಣ್ಣಬಿಡು, ಹೊನ್ನಬಿಡು, ಮಣ್ಣಬಿಡು, ಮನೆಯಬಿಡು,**
> **ಮಡದಿಬಿಡು, ಬಿಡದಿ ಬಿಡು, ಅದನ್ನುಬಿಡು, ಇದನ್ನಬಿಡು,**
> **ಏನೇನ ಬಿಡ ಹೇಳುವರಯ್ಯ**
> **ಈ ಬೆನ್ನ ಬಿಡದ ಬೈರಾಗಿಗಳು !**
> **ಈ ಎಲ್ಲವನ್ನು ಬಿಡು ಎನ್ನುವ ಬದಲು**
> **ಜೀವಬಿಡು ಎಂದು ಬಿಡಬಾರದೇ?"**

ಎಂದು ಕೇಳುವ ಅವರ ವಚನದಲ್ಲಿ ಶರಣರ ಆದರ್ಶವಿದೆ. ಶರಣರು ಯಾವುದನ್ನು ಬಿಡು ಎಂದು ಆದೇಶಿಸಲಿಲ್ಲ. ಸಂಸಾರದಲ್ಲಿದ್ದುಕೊಂಡೇ ಆಧ್ಯಾತ್ಮದೆತ್ತರವನ್ನು ತಲುಪಿದರು. ಹೆಣ್ಣು ಹೊನ್ನು ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಎಂದು ಮೊದಲ ಬಾರಿಗೆ ಅವರು ಸ್ಪಷ್ಟಪಡಿಸಿದರು. ಅದೇ ದಾರಿಯಲ್ಲಿ ನಡೆದ ಕಾವ್ಯಾನಂದರು ಈ ವಚನದಲ್ಲಿ ಶರಣರ ಆಶಯವನ್ನೇ ವ್ಯಕ್ತಪಡಿಸಿದ್ದಾರೆ. ಎಲ್ಲವನ್ನು ಬಿಡುವ ಬದಲು, ಅವೆಲ್ಲವುಗಳೊಂದಿಗಿದ್ದೇ ಇರದಂತಿರಬೇಕೆಂದು ಕವಿ ಸಂದೇಶ ಕೊಡುತ್ತಾರೆ. ಇಹದ ಮೂಲಕ-ಪರವನ್ನು ಕಾಣುವ ಮಹತ್ವದ ಸಿದ್ಧಾಂತ ಇದಾಗಿದೆ. ಮಡಿ,

ಮೈಲಿಗೆ, ಸೂತಕಗಳನ್ನು ಮೀರಿ ಮುನ್ನಡೆಯುವ ಶಕ್ತಿ ಹೆಣ್ಣಿನದೆಂದು ಪುರಾಣಿಕರು ಮತ್ತೊಂದು ವಚನದಲ್ಲಿ ಹೇಳಿದ್ದಾರೆ. ಗಂಡಿನಲ್ಲಿ ಹೆಣ್ಣಿದೆ, ಹೆಣ್ಣಿನಲ್ಲಿ ಗಂಡಿದೆ ಹೀಗಾಗಿ ಪ್ರತಿಯೊಂದು ಜೀವಿಯೂ ಅರ್ಧನಾರೀಶ್ವರ ನಾಗಿದೆಯೆಂದು ನಂಬುವ ಪುರಾಣಿಕರು ಶಿವತತ್ತ್ವವನ್ನೇ ಸಾರಿ ಹೇಳಿದ್ದಾರೆ.

> **"ಸತಿ ತಪ್ಪಿದರೂ ಚಿತೆ ತಪ್ಪಲಿಲ್ಲ**
> **ಈ ದೇಶದಲ್ಲಿ ಸತಿಗೆ!**
> **ಮುಗಿಯದ ಪಯಣ ಅವಳದು**
> **ಚಿತೆಯಿಂದ ಚಿತೆಗೆ!**
> **ಆಗ ಸಹಗಮನದ ಚಿತೆ**
> **ಈಗ ವರದಕ್ಷಿಣೆಯ ಚಿತೆ**
> **ಶೀಲ ಹರಣಗಳ ಚಿತೆ**
> **ಕೊನೆಗೂ ಹೆಣ್ಣಿನ ಬಾಳು**
> **ಕಣ್ಣೀರಿನ ಕಥೆ !**

ಈ ವಚನದಲ್ಲಿ ಪುರಾಣಿಕರು "ಚಿತೆ"ಯ ವಿವಿಧ ಮಗ್ಗಲುಗಳನ್ನು ಪರಿಚಯಿಸಿದ್ದಾರೆ. ಸತಿಗೂ-ಚಿತೆಗೂ ಇರುವ ಗಾಢ ಸಂಬಂಧದ ಕ್ರೂರ ಸತ್ಯವನ್ನು ವಿವರಿಸುತ್ತ ಹೊಗುತ್ತಾರೆ. ಇಪ್ಪತ್ತೊಂದನೇ ಶತಮಾನದಲ್ಲಿಯೂ ಸತಿಪದ್ಧತಿ ಜೀವಂತವಾಗಿದೆಯೆಂಬುದು ಸ್ಪಷ್ಟವಾಗುತ್ತದೆ.

ಸತಿಪದ್ಧತಿಯಲ್ಲಿ, ಪತಿಯನ್ನಗಲಿದ ಸತಿ, ಚಿತೆಯೇರಿ ಮಹಾಸತಿ ಯಾಗುತ್ತಾಳೆ, ಮಾಸ್ತಿಗಲ್ಲಾಗುತ್ತಾಳೆ. ಆದರೆ ಚಿತೆಯೇರದ ಸತಿಯರು ಜೀವಂತ ವಾಗಿದ್ದರೂ ನಿತ್ಯ ಒಂದಿಲ್ಲೊಂದು ಚಿತೆಯ ಮೂಲಕ ದಹನ ವಾಗುತ್ತಲೇ ಇರುತ್ತಾರೆಂಬ ಕಟುಸತ್ಯವನ್ನು ಕವಿ ಇಲ್ಲಿ ಮನಮಿಡಿಯುವಂತೆ ಹೇಳಿದ್ದಾರೆ.

ಸತಿಪದ್ಧತಿಯ ಚಿತೆ ಕೇವಲ ಬೆಂಕಿಮಾತ್ರವಾದರೆ, ಸತಿಯಾಗದವಳ ಚಿತೆ ವಿವಿಧ ರೀತಿಯಿಂದ ಕೂಡಿದೆ. ವರದಕ್ಷಿಣೆಯ ಚಿತೆ, ಬಲಾತ್ಕಾರಗಳ ಚಿತೆ, ಶೀಲಹರಣಗಳ ಚಿತೆ ಹೀಗೆ ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.



ಸತಿಹೋಗಲಿ ಅಥವಾ ಇರಲಿ ಅವಳಿಗೆ ಚಿತೆ ತಪ್ಪಿದ್ದಲ್ಲವೆಂಬ ಸತ್ಯವನ್ನು ಪರಿಣಾಮಕಾರಿಯಾಗಿ ಹೇಳಿದ್ದಾರೆ.

ಸತಿಪದ್ಧತಿಯ ಹಿಂದೆ ಸಂಪ್ರದಾಯದ ಆಚರಣೆಯ ಸೋಗು ಕಾಣಿಸಿದರೆ, ಪತಿ ಇದ್ದಾಗಲೂ ನಿತ್ಯ ಚಿತೆಯೇರುವ ಸತಿಯರ ಜೀವನ ಭಯಾನಕವಾಗಿದೆ, ದುರಂತದಿಂದ ಕೂಡಿದೆ. ಸ್ತ್ರೀ ಶೋಷಣೆಯ ಈ ವಿಷಯವನ್ನು ಪುರಾಣಿಕರು ತಮ್ಮ ವಚನಗಳಲ್ಲಿ ಮನ ಮುಟ್ಟುವಂತೆ ಹೇಳಿದ್ದಾರೆ.

ಇಡೀ ವ್ಯವಸ್ಥೆಯೇ ಹೆಣ್ಣನ್ನು ಹೇಗೆ ದ್ವಂದ್ವರೀತಿಯಲ್ಲಿ ಕಾಣುತ್ತದೆ ಯೆಂಬುದಕ್ಕೆ ಅವರ ಈ ವಚನವನ್ನು ಗಮನಿಸಬೇಕು:

> **"ತಾಯಿ ದೇವರೆನ್ನುವ ಬಾಯಿಯೇ**
> **ಸತಿ-ಶೂದ್ರಳೆನ್ನುವುದು**
> **ಎಂಥ ವಿರೋದಾಭಾಸ!**
> **ಹೆಣ್ಣು ಮಾಯೆಯೆನ್ನುವವರೇ**
> **ಹೆಣ್ಣಿನ ಹೊಟ್ಟೆಯಲ್ಲಿಯೇ ಹುಟ್ಟಿರುವುದು**
> **ಎಂಥ ವಿಪರ್ಯಾಸ!**
> **ಹೆಣ್ಣೂ ಸಹ**
> **ಹೆಣ್ಣು ಹುಟ್ಟಿದಾಗ ಅಳುವುದು**
> **ಎಂಥ ವಿಧಿವಿಲಾಸ!**
> **ಹೆಣ್ಣಿನ ಹಾಲಿಂದಲೇ ಬಲಿತು**
> **ಹೆಣ್ಣನ್ನೇ ಅಬಲೆಯಾಗಿಸುವುದು**
> **ಎಂಥ ಕಲ್ಮಷ!"**

ಹೆಣ್ಣಿನ ಬಗೆಗಿರುವ ಈ ದ್ವಂದ್ವನಿತಿ ಉದ್ದಕ್ಕೂ ಬೆಳೆದುಕೊಂಡು ಬಂದಿದೆ. ತಾಯಿಯೆನ್ನುವ ಬಾಯಿಯೇ ಹೆಣ್ಣನ್ನು ಮಾಯೆಯೆಂದು ಕರೆಯುವುದು, ಶೂದ್ರಳೆಂದು ದೂರವಿಡುವುದು, ಅಸ್ಪೃಷ್ಯಳನ್ನಾಗಿಸುವುದು ಈ ಸಮಾಜ ವ್ಯವಸ್ಥೆಯಲ್ಲಿ ಸಹಜವೆಂಬಂತೆ ನಡೆಯುತ್ತವೆ. ಇದನ್ನು ಕವಿ ವಸ್ತುನಿಷ್ಠವಾಗಿ

ವಿವರಿಸಿದ್ದಾರೆ. ಹೆಣ್ಣು ಹುಟ್ಟಿದಾಗ ಹೆಣ್ಣೇ ಅಳುವುದು ಎಂಥ ವಿಧಿ ವಿಲಾಸ! ಎಂದು ಕವಿ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಹೆಣ್ಣಿನ ಗೋಳನ್ನು, ಅವಳ ನಿರಂತರ ಶೋಷಣೆಯನ್ನು ಕಂಡ ಹೆಣ್ಣು ಮಕ್ಕಳು "ಹೆಣ್ಣಾಗೋದಕ್ಕಿಂತ ಮಣ್ಣಾಗೋದು ಲೇಸೆಂದು" ಹೇಳುವುದು ಸಹಜ, ಹೆಣ್ಣು ಹುಟ್ಟಿದಾಗ ಅಳುವುದು ಸಹಜ. ಅದು ಅವಳ ಅಜ್ಞಾನ ಅಥವಾ ವಿಧಿವಿಲಾಸವಾಗಿರದೆ ವಾಸ್ತವದ ಕ್ರೂರಸತ್ಯವಾಗಿದೆ. ತಾಯಿಯ ಹಾಲನ್ನು ಕುಡಿದೇ ಬೆಳೆದು ಬಲವಂತರಾದವರು ಅವಳನ್ನೇ ಅಬಲೆ-ಅಸಹಾಯಕಿಯೆಂದು ಭಾವಿಸುವುದು ಎಷ್ಟು ಸರಿ? ಎಂದು ಕವಿ ಪ್ರಶ್ನೆ ಮಾಡಿದ್ದಾರೆ.

ಕಾವ್ಯಾನಂದರು ಮಹಿಳೆಯನ್ನು ಕುರಿತಂತೆ ತಮ್ಮ ವಚನಗಳಲ್ಲಿ ವಸ್ತುಸ್ಥಿತಿಯನ್ನು ಯಥಾವತ್ತಾಗಿ ವಿವರಿಸಿದ್ದಾರೆ. ಅವರ ವಚನಗಳಲ್ಲಿ ಸ್ತ್ರೀವಾದವಿಲ್ಲ, ಆದರೆ ಸ್ತ್ರೀಯರ ಬಗೆಗಿನ ವಾಸ್ತವ ಚಿತ್ರಣ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಹೆಣ್ಣಿನ ಹಿರಿಮೆಯನ್ನು ಈ ಗಂಡುಗಳು ಅರಿಯುವಂತಾಗಬೇಕೆಂದು ಅವರು ಸ್ವತಂತ್ರಧೀರ ಸಿದ್ಧೇಶ್ವರನಲ್ಲಿ ಕೇಳಿಕೊಂಡಿದ್ದಾರೆ. ಸ್ತ್ರೀಯರನ್ನು ಶತಮಾನಗಳಿಂದ ಶೋಷಿಸುತ್ತಿರುವ ಅಸಮಾನತೆಯ ವ್ಯವಸ್ಥೆಯನ್ನು ಬೆತ್ತಲೆಗೊಳಿಸಿದ್ದಾರೆ. ಇಂತಹ ರಚನೆಗಳೂ ಕೂಡ ಸ್ತ್ರೀ ಜಾಗೃತಿಗೆ, ಸ್ತ್ರೀ ಬಗೆಗಿನ ತಿಳುವಳಿಕೆಗಳಿಗೆ ಸಹಾಯಕಾರಿಯಾಗುತ್ತವೆ. ಇಲ್ಲಿ ಅಬ್ಬರದ ಬಂಡಾಯವಿಲ್ಲ. ಪುರುಷ ದ್ವೇಷಿ ಹೇಳಿಕೆಗಳಿಲ್ಲ ಆದರೂ ಕೂಡ ಸ್ತ್ರೀ ಬಗೆಗೆ ಮಹತ್ವದ ಮಾತುಗಳನ್ನಾಡುತ್ತ ಸಮಾಜ ವ್ಯವಸ್ಥೆಯನ್ನು ಎಚ್ಚರಿಸುವ, ಗಂಡುಗಳ ಆತ್ಮಶೋಧನೆಗೆ ಹಚ್ಚುವ ಅನೇಕ ರಚನಾತ್ಮಕ ಪ್ರಯತ್ನಗಳನ್ನಿಲ್ಲಿ ಕಾಣಬಹುದಾಗಿದೆ. ನವೋದಯ ನವ್ಯದ ಸಂದರ್ಭದಲ್ಲಿ ರಚನೆಯಾದ ಈ ವಚನಗಳು ಸ್ತ್ರೀ ಸಮಾನತೆಗೆ ಸಂಬಂಧಿಸಿದಂತೆ ತನ್ನದೇ ಆದ ಕೊಡುಗೆಯನ್ನು ನೀಡಿವೆ. ಶರಣಪರಂಪರೆಯ ಪ್ರಭಾವದಲ್ಲಿ ಬೆಳೆದ ಕಾವ್ಯಾನಂದರು ಸ್ತ್ರೀ ಬಗೆಗೆ ಅಪಾರ ಗೌರವ ಹೊಂದಿದವರಾಗಿದ್ದರೆಂಬುದು ಬಹು ಮುಖ್ಯವಾಗುತ್ತದೆ.

# ಸಮಾರೋಪ

ಹನ್ನೆರಡನೇ ಶತಮಾನ-ಹದಿನಾರನೇ ಶತಮಾನ ಹಾಗೂ ಇಪ್ಪತ್ತನೇ ಶತಮಾನಗಳಲ್ಲಿ ರಚನೆಯಾದ ವಚನಗಳಿಗೆ ಸಂಬಂಧಿಸಿದಂತೆ ತೌಲನಿಕ ಅಧ್ಯಯನ ನಡೆಯಬೇಕಾಗಿದೆ. ಆಧುನಿಕ ವಚನಕಾರರಲ್ಲಿ ಸಿದ್ಧಯ್ಯ ಪುರಾಣಿಕರು ಮಹತ್ವದ ವಚನಕಾರರಾಗಿ ಕಾಣಿಸುತ್ತಾರೆ. ಹದಿನೈದುನೂರು ವಚನಗಳನ್ನು ರಚಿಸಿರುವ ಪುರಾಣಿಕರು ಕೇವಲ ಸಂಖ್ಯೆಯ ದೃಷ್ಟಿಯಿಂದ ಮಾತ್ರ ಗಮನ ಸೆಳೆಯದೆ ಸತ್ವದ ದೃಷ್ಟಿಯಿಂದಲೂ ಮುಖ್ಯರಾಗುತ್ತಾರೆ. ಹದಿನಾರನೇ ಶತಮಾನದ ಜೇವರ್ಗಿ ಷಣ್ಮುಖ ಶಿವಯೋಗಿಯ ವಚನಗಳಿಗೂ, ಪುರಾಣಿಕರ ವಚನೆಗಳಿಗೂ ಅನೇಕ ವಿಷಯಗಳಲ್ಲಿ ಸಾಮ್ಯತೆಯನ್ನು ಕಾಣಬಹುದಾಗಿದೆ. ಜೇವರ್ಗಿ ಷಣ್ಮುಖ ಶಿವಯೋಗಿಗಳು ಮತ್ತು ಸಿದ್ಧಯ್ಯ ಪುರಾಣಿಕರು ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ಸೇರಿದವರು. ಈ ಪ್ರದೇಶದ ಧಾರ್ಮಿಕ ಆಶಯಗಳು ಇವರ ವಚನಗಳಲ್ಲಿ ಮರುಹುಟ್ಟು ಪಡೆದಿವೆ.

ಆಧುನಿಕ ಸಂದರ್ಭದಲ್ಲಿ ವಚನಕಾರರೆಂದರೆ ಸಿದ್ಧಯ್ಯ ಪುರಾಣಿಕರು ಎಂಬುವಷ್ಟರ ಮಟ್ಟಿಗೆ ಇವರು ಗುರುತಿಸಿಕೊಂಡಿದ್ದಾರೆ. ಹೀಗೆಂದಾಕ್ಷಣ ಪುರಾಣಿಕರ ವಚನಗಳಲ್ಲಿ ಮಿತಿಗಳಿಲ್ಲವೆಂದರ್ಥವಲ್ಲ. ಅವರ ವಚನಗಳಲ್ಲಿಯೂ ಅನೇಕ ಮಿತಿಗಳಿವೆ. ಪ್ರಾಸವನ್ನು ಕಾಯ್ದುಕೊಳ್ಳುವ ಸಲುವಾಗಿಯೇ ಅನೇಕ ಪದಗಳು ವ್ಯರ್ಥವಾಗಿ ಬಂದು ಸೇರಿವೆ. ಅನೇಕ ವಚನಗಳಲ್ಲಿ ವಿಷಯ ಪುನರಾವರ್ತನೆಯಿದೆ. ಇವರ ವಚನಗಳಲ್ಲಿ ಧ್ವನಿಗಿಂತಲೂ ವಿವರಣೆ ಹೆಚ್ಚೆನಿಸುತ್ತದೆ. ಜೀವನಾನುಭವದಲ್ಲಿ ವೈವಿಧ್ಯತೆಯಿಲ್ಲ. ಒಬ್ಬ ಅಧಿಕಾರಿಯಾಗಿದ್ದ ಪುರಾಣಿಕರು ತಮ್ಮ ಸೀಮಿತ ಜೀವನಾನುಭವದ

ಹಿನ್ನಲೆಯಲ್ಲಿಯೆ ಇಷ್ಟೊಂದು ವಚನಗಳನ್ನು ರಚಿಸಿದ್ದಾರೆ. ವಚನೋದ್ಯಾನ, ವಚನನಂದನ, ವಚನರಾಮ– ಹೀಗೆ ಮೂರು ವಚನ ಸಂಕಲನಗಳು ಪ್ರಕಟವಾದರೂ, ಒಂದರಿಂದ ಮತ್ತೊಂದರಲ್ಲಿ ಕುತೂಹಲಕಾರಿಯಾದ ಬೆಳವಣಿಗೆಗಳು ಕಾಣಿಸುವುದಿಲ್ಲ. ಒಂದೇ ಅನುಭವವೇ ಬೇರೆ ಬೇರೆ ಸಂದರ್ಭಗಳ ಮೂಲಕ ಪ್ರಕಟವಾದುದನ್ನು ಕಾಣಬಹುದಾಗಿದೆ. ಇಂತಹ ಮಿತಿಗಳನ್ನು ಗಮನಿಸಿಯೂ ಇವರ ವಚನಗಳನ್ನು ಅಧ್ಯಯನ ಮಾಡಬೇಕಾದ ಅಗತ್ಯತೆಯಿದೆ.

ಪುರಾಣಿಕರ ವಚನಗಳಲ್ಲಿ ತೀವ್ರ ವಿಡಂಬನೆಗಿಂತ ವಿನಮ್ರವಾದ ಆತ್ಮ ನಿವೇದನೆಯಿದೆ. ಇವರ ಹೆಚ್ಚಿನ ವಚನಗಳಲ್ಲಿ ಈ ಆತ್ಮವಿಮರ್ಶೆಯ ವಿಚಾರ ಪ್ರಕಟವಾಗಿದೆ. ಕ್ರಾಂತಿಕಾರಿ ವಿಚಾರಗಳಿಗಿಂತ ಅಂತಃಕರಣದ ಮಾತುಗಳು ಹೆಚ್ಚಾಗಿವೆ. ಮಹಾತ್ವಾಕಾಂಕ್ಷೆಗಿಂತ ಮನಪರಿವರ್ತನೆಯ ಮಾರ್ಗವಿದೆ. ಮಹಾಕವಿಯ ಸಂಕೀರ್ಣ ಶೈಲಿಗಿಂತ, ಆಪ್ತಮಿತ್ರನಂತೆ ಕೈಹಿಡಿಯುವ ನಲ್ಮೆಯ ನುಡಿಯಿದೆ. ತನ್ನ ಬದುಕಿನ ಪುಟಗಳನ್ನು ವಿನಯದಿಂದ ತೆರೆದಿಡುವ ಸೌಜನ್ಯವಿದೆ. ಅಬ್ಬರಿಸಿ ಆರಿಹೋಗುವದಕ್ಕಿಂತ, ಸಣ್ಣಗೆ ಮೇಣಬತ್ತಿಯ ತರಹ ತಣ್ಣಗೆ ಬೆಳಕು ನೀಡುವ ಗುಣವಿದೆ. ಈ ಎಲ್ಲ ಕಾರಣಗಳಿಂದ ಪುರಾಣಿಕರ ವಚನಗಳನ್ನು ಮತ್ತೆ ಮತ್ತೆ ಅಧ್ಯಯನ ಮಾಡಬೇಕೆನಿಸುತ್ತದೆ.

ಬದುಕಿನಲ್ಲಿ ಏನೂ ಇಲ್ಲ, ಎಲ್ಲಾ ಮುಗಿದು ಹೋಯಿತು ಎಂಬ ಭಾವ ಬರುವಷ್ಟರಲ್ಲಿಯೇ, ಪ್ರಕೃತಿ ಮೈತುಂಬ ಹಸಿರುಟ್ಟು ಮೇಲೇಳುವ ಹಾಗೆ ಪುರಾಣಿಕರ ವಚನಗಳು ಅನಂತ ಭರವಸೆಗಳ ಮೂಲಕ ಬದುಕಿನ ವಿಸ್ತಾರವನ್ನು ಹೆಚ್ಚಿಸತೊಡಗುತ್ತವೆ. ಅಲ್ಲಮನ ಅನುಭಾವ, ಬಸವಣ್ಣನ ಕಳಕಳಿ, ಅಕ್ಕನ ಅನನ್ಯತೆ ಪುರಾರಣಿಕರ ಅನೇಕ ವಚನಗಳಲ್ಲಿ ಕೂಡಿಕೊಂಡು ಬೆಳೆದಿವೆ.

ಪುರಾಣಿಕರ ವಚನಗಳ ಭಾಷೆಯಲ್ಲಿ ಹೈದ್ರಾಬಾದ ಕರ್ನಾಟಕದ ಅಸಲುತನ ಕಾಣಿಸುವುದಿಲ್ಲ. ಈ ನೆಲದ ಗಂಡು ಮೆಟ್ಟಿನ ಭಾಷೆ ಇಲ್ಲಿ ಕಾಣಸಿಗುವುದಿಲ್ಲ. ಗ್ರಾಂಥಿಕ ಭಾಷೆಯನ್ನವರು ಅನುಸರಿಸಿದ್ದಾರೆ. ಅಯ್ಯ, ಅಯ್ಯ ಎನ್ನುವಂತಹ ಪದಗಳು, ಹನ್ನೆರಡನೇ ಶತಮಾನದ ವಚನಕಾರರ ಪ್ರಭಾವದ ಬೆಳವಣಿಗೆಯಾಗಿವೆ. ಧಿಮಿಗುಡುವ ಈ ಪ್ರದೇಶದ ಭಾಷೆ ಇಲ್ಲಿ



ಕಾಣಿಸುವುದಿಲ್ಲ. ಆದರೆ ಅವರ ಕಾವ್ಯ ಭಾಷೆ ಸರಳವಾಗಿದೆ, ಸುಲಲಿತವಾಗಿದೆ. ಕರ್ನಾಟಕದ ಯಾವುದೇ ಪ್ರದೇಶದ ಸಾಮಾನ್ಯ ಓದುಗನೂ ಅವರ ವಚನಗಳನ್ನು ಅರ್ಥೈಸಿಕೊಳ್ಳಬಹುದಾಗಿದೆ. ಅಷ್ಟೊಂದು ಸರಳತೆ, ಲಾಲಿತ್ಯ, ಅಂತ್ಯಪ್ರಾಸ ಅವರ ಭಾಷಾಶೈಲಿಯ ಆಕರ್ಷಣೆಗಳಾಗಿವೆ. ಈ ಪ್ರದೇಶದ ಹಿರಿಯ ಕವಿಗಳ ಕೃತಿಗಳನ್ನು ಹೊಸ ಬೆಳಕಿನಲ್ಲಿ ಚರ್ಚಿಸುವದರ ಮೂಲಕ ಇಲ್ಲಿಯ ಸಾಧ್ಯತೆಗಳನ್ನು ಗುರುತಿಸಬಹುದಾಗಿದೆ.

ಕಾವ್ಯಾನಂದರು ವಚನಗಳನ್ನು ಬರೆಯುತ್ತಿದ್ದ ಸಂದರ್ಭದಲ್ಲಿಯೇ ಅನೇಕ ಕವಿಗಳು ವಚನಗಳನ್ನು ರಚಿಸಿದ್ದಾರೆ. ಅವರುಗಳಲ್ಲಿ ಮೂಜಗಂ, ಮಹಾದೇವ ಬಣಕಾರ ಮೊದಲಾದವರನ್ನು ಹೆಸರಿಸಬಹುದಾಗಿದೆ. ಮೂಜಗಂ ಅವರ ವಚನಗಳು ಆಧ್ಯಾತ್ಮವನ್ನೇ ಮುಖ್ಯವಾಗಿರಿಸಿಕೊಂಡರೆ, ಬಣಕಾರರ ವಚನಗಳಲ್ಲಿ ಕಾವ್ಯದ ಅನನ್ಯತೆ ಕಡಿಮೆ. ಪುರಾಣಿಕರು ಇವರಿಬ್ಬರಿಗಿಂತ ಭಿನ್ನವಾಗಿ ಆಧುನಿಕ ವಚನ ಕ್ಷೇತ್ರದಲ್ಲಿ ಬೆಳೆದು ನಿಲ್ಲುತ್ತಾರೆ. ಇವರಿಬ್ಬರ ವಚನ ರಚನೆಗಳಿಗಿಂತ ಪುರಾಣಿಕರ ವಚನಗಳು ಸರಳವೂ, ಕಾವ್ಯತೆಯಿಂದ ಕೂಡಿದವೂ ಆಗಿವೆ. ಅದೆಲ್ಲಕ್ಕಿಂತ ಮುಖ್ಯವಾಗಿ ಪುರಾಣಿಕರ ವಚನಗಳು ಹೆಚ್ಚು ಜನಪರವಾಗಿವೆ, ಸಮಾಜ ಮುಖಿಯಾಗಿವೆ. ಆದರೆ ಶರಣರ ಪ್ರಭಾವದಿಂದ ಅವರು ಬಿಡಿಸಿಕೊಂಡು ಬರೆದದ್ದು ಬಹಳ ಕಡಿಮೆಯೆಂದೇ ಹೇಳಬಹುದು. ಎತ್ತ ನೋಡಿದರೂ ಅವರ ಸುತ್ತಮುತ್ತ ಶರಣರ ಪ್ರಭಾವವೇ ತುಂಬಿ ಕೊಂಡಿದೆ. ಸತಿ–ಪತಿಭಾವದ ವಚನಗಳಲ್ಲಂತೂ ಅವರು ನೇರವಾಗಿ ಶರಣರ ಆಶಯಗಳನ್ನೇ ವ್ಯಕ್ತಪಡಿಸಿದ್ದಾರೆ. ಆಧುನಿಕ ಶಿಕ್ಷಣದ ಎಚ್ಚರ, ಹಾಗೂ ಸಂಪ್ರದಾಯದ ಅಪಾಯ ಎರಡನ್ನೂ ತಿಳಿದುಕೊಂಡಿದ್ದ ಪುರಾಣಿಕರು ತಮ್ಮ ವಚನಗಳಲ್ಲಿ ಈ ಅಂಶಗಳನ್ನು ತುಂಬ ವಸ್ತುನಿಷ್ಠವಾಗಿ ಪರಿಶೀಲಿಸುತ್ತಾರೆ. ಇಹದ ಮೂಲಕವೇ ಶರಣರು ಪರವನ್ನು ಸ್ವಾಗತಿಸಿದಂತೆ, ನರನಲ್ಲಿಯೇ ಹರನನ್ನು ಕಂಡಂತೆ, ಅಸಮಾನತೆಯ ವ್ಯವಸ್ಥೆಯಲ್ಲಿಯೇ ಸಮಾನತೆಯ ಆಶಯವನ್ನು ಕಟ್ಟಿಕೊಡುವ ಪ್ರಯತ್ನಗಳನ್ನು ಅವರ ವಚನಗಳು ಮಾಡಿವೆ. ಈಗಾಗಲೇ ಹೇಳಿರುವಂತೆ ಭಾಷೆ–ಶೈಲಿಯ ದೃಷ್ಟಿಯಿಂದ ಅವರ ವಚನಗಳು ಎಲ್ಲ ಪ್ರದೇಶದ ಓದುಗರ ಗಮನ ಸೆಳೆಯುತ್ತವೆ. ತುಂಬ ಸರಳ–ನೇರ–ಹಾಗೂ ದಿನನಿತ್ಯದ ಮಾತುಗಳನ್ನಿಟ್ಟು ಕೊಂಡೇ ಅವರು ಕಾವ್ಯ ಕಟ್ಟುತ್ತ ಸಾಗುತ್ತಾರೆ.

"ಕಾವ್ಯಾನಂದ" ಕಾವ್ಯನಾಮದಲ್ಲಿ ಸಾಹಿತ್ಯಕ್ಷೇತ್ರದಲ್ಲಿ ಬೆಳೆದುನಿಂತ ಸಿದ್ಧಯ್ಯ ಪುರಾಣಿಕರು ಕಾವ್ಯ, ವಚನ, ನಾಟಕ, ಸಣ್ಣಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ, ಜೀವನಚರಿತ್ರೆ, ಆತ್ಮಚರಿತ್ರೆ, ಸಂಪಾದನೆ ಹೀಗೆ ಹತ್ತು ಹಲವಾರು ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಸೃಜನಶೀಲ ಸಾಹಿತ್ಯದಲ್ಲಿ ಕಾವ್ಯ ಹಾಗೂ ವಚನಗಳ ಮೂಲಕ ಪುರಾಣಿಕರು ಗಮನ ಸೆಳೆಯುತ್ತಾರೆ. ಒಂಬತ್ತು ಕವನ ಸಂಕಲನಗಳನ್ನು ರಚಿಸಿದ್ದಾರೆ. ಅವರ ನಾಟಕ ಮತ್ತು ಕಾದಂಬರಿಗಳು ಹೆಚ್ಚಾಗಿ ಐತಿಹಾಸಿಕ ವಿಷಯವನ್ನೊಳಗೊಂಡಿವೆ.

"ಮೊದಲು ಮಾನವನಾಗು" –ಕವನ, ಕಾವ್ಯಕ್ಷೇತ್ರದಲ್ಲಿ ಜನಪ್ರಿಯವಾಗಿದೆ. ಅನೇಕ ಭಾಷಣಗಳಲ್ಲಿ ಈ ಕವಿತೆಯ ಸಾಲುಗಳನ್ನು ಉದಾಹರಿಸುವದನ್ನು ಕಂಡಿದ್ದೇವೆ. ಮಂತ್ರಿಯಾಗು, ಅಧಿಕಾರಿಯಾಗು, ಏನಾದರೂ ಆಗು ಮೊದಲು ಮಾನವನಾಗು ಎಂಬ ಕವಿವಾಣಿ, ಸರಳ ನುಡಿಗಳಲ್ಲಿದ್ದರೂ ತೀವ್ರವಾಗಿ ಮುಟ್ಟುತ್ತದೆ. ಈ ವ್ಯವಸ್ಥೆಯಲ್ಲಿ ಏನಾದರೂ ಆಗಬಹುದು, ಆದರೆ ಮಾನವನಾಗುವುದು ಬಹಳ ಕಷ್ಟ. ಎಲ್ಲರೂ ಮಾನವರಾಗಬೇಕೆಂಬುದು ಕವಿಯ ಆಶಯ. ಕಪ್ಪು–ಬಿಳಿ ಬಣ್ಣಗಳಲ್ಲಿ ಬಿಳಿಬಣ್ಣ ಶ್ರೇಷ್ಠ, ಕಪ್ಪುಬಣ್ಣ ಕನಿಷ್ಠ ಎಂಬಂಥಹ ಭಾವನೆಗಳಿದ್ದ ಸಂದರ್ಭದಲ್ಲಿ ಅವರು ಕಪ್ಪುಬಣ್ಣವೂ ಮಹತ್ವದ್ದಾಗಿದೆ, ಅದರಲ್ಲಿಯೂ ಆಕರ್ಷಣೆ ಇರುತ್ತದೆಂದು ಹೇಳಿದವರು. "ನಾ ಕರಿಯಳೆಂದು ನೀ ಜರೆಯಬೇಡ...." ಎಂಬಂತಹ ಕವಿತೆಯ ಸಾಲುಗಲು ಸಹೃದಯರ ನಾಲಗೆಯಮೇಲೆ ಸದಾ ನಿಲ್ಲುವಂತವುಗಳಾಗಿವೆ. ಕಪ್ಪುಬಣ್ಣದ ನೇರಲಹಣ್ಣು, ಬಿಳೆಬಣ್ಣದ ಅತ್ತಿಹಣ್ಣುಗಳ ಮೂಲಕ ಅವರು ವರ್ಣ ಸಂಘರ್ಷದ ಜಗತ್ತನ್ನು ಪ್ರವೇಶಿಸುತ್ತಾರೆ. ಒಬ್ಬ ಐ.ಎ.ಎಸ್ ಅಧಿಕಾರಿಯಾಗಿದ್ದ ಪುರಾಣಿಕರು ಸಾಹಿತ್ಯ ಕ್ಷೇತ್ರದಲ್ಲಿ ಇಷ್ಟೊಂದು ಕೃಷಿ ಮಾಡಿ ಅಷ್ಟು ಚರ್ಚೆಗೆ ಒಳಗಾಗದೇ ಹೊಗಿದ್ದು, ನಮ್ಮ ವಿಮರ್ಶಾಲೋಕವನ್ನು ಅನುಮಾನದಿಂದ ನೋಡುವಂತೆ ಮಾಡುತ್ತದೆ. ಎಲ್ಲ ಕ್ಷೇತ್ರಗಳಲ್ಲೂ ಸೈ ಎನಿಸಿಕೊಂಡ ಸಿದ್ಧಯ್ಯ ಪುರಾಣಿಕರಂತಹ ಸರಳ ವ್ಯಕ್ತಿಗಳು ನಮಗಿಂದು ಮಾದರಿಯಾಗಬೇಕಾಗಿದೆ.

■

ಅನುಬಂಧ – I

# ಕವಿ ಪರಿಚಯ

"ಕಾವ್ಯಾನಂದ" ಕಾವ್ಯನಾಮದಲ್ಲಿ ಸಾಹಿತ್ಯಕೃಷಿ ಮಾಡಿದ ಡಾ.ಸಿದ್ಧಯ್ಯ ಪುರಾಣಿಕ ಅವರು ಕೊಪ್ಪಳ ಜಿಲ್ಲೆಯ ಕುಕನೂರಿನ ಸಮೀಪದ ದ್ಯಾಂಪುರ ಗ್ರಾಮದಲ್ಲಿ ಕ್ರಿ.ಶ. ೧೯–೦೬–೧೯೧೮ರಲ್ಲಿ ಜನಿಸಿದರು. ಕಲ್ಲಿನಾಥ ಶಾಸ್ತ್ರಿ ಹಾಗೂ ದಾನಮ್ಮ ಇವರ ತಂದೆ–ತಾಯಿ. ಕಲ್ಲಿನಾಥ ಶಾಸ್ತ್ರಿಗಳು ಪಂಡಿತರು; ಪುರಾಣ–ನಾಟಕಗಳನ್ನು ರಚಿಸಿದ್ದರು. ಕವಿರತ್ನರೆಂದು ಖ್ಯಾತರಾದ ದ್ಯಾಂಪುರ ಚೆನ್ನಕವಿಗಳು ಸಿದ್ಧಯ್ಯನವರ ತಾತ ಆಗಿದ್ದಾರೆ. ಇಂತಹ ಸಾಹಿತ್ಯಕ ಪರಿಸರದಲ್ಲಿ ಸಿದ್ಧಯ್ಯನವರ ಬಾಲ್ಯ ಜೀವನ ಪ್ರಾರಂಭವಾಯಿತು. ಕುಕನೂರಿನ ವಿದ್ಯಾನಂದ ಗುರುಕುಲ ಶಾಲೆಯಲ್ಲಿ ವಿದ್ಯಾಭ್ಯಾಸ ಪ್ರಾರಂಭಿಸಿ, ಕಲಬುರ್ಗಿ ಮತ್ತು ಹೈದ್ರಾಬಾದಗಳಲ್ಲಿ ಉನ್ನತ ಶಿಕ್ಷಣ ಪಡೆದ ಕಾವ್ಯಾನಂದರು ನಿಜಾಂ ಆಳ್ವಿಕೆಯಲ್ಲಿಯೇ ತಹಸೀಲ್ದಾರರಾಗಿ ಸರಕಾರಿ ಸೇವೆಗೆ ಸೇರಿದರು, ಮುಂದೆ ಕಮೀಷನರ್ ಆಗಿ ನಿವೃತ್ತಿ ಹೊಂದಿದರು.

ಇವರ ಕೌಟುಂಬಿಕ ಜೀವನ ತೃಪ್ತಿದಾಯಕವಾಗಿತ್ತು. ಧಾರವಾಡದ ಚರಂತಿಮಠದ ಗಿರಿಜಾದೇವಿಯನ್ನು ವಿವಾಹವಾದ ಸಿದ್ಧಯ್ಯನವರಿಗೆ ನಾಲ್ಕು ಮಕ್ಕಳು ಜನಿಸಿದರು. ಒಬ್ಬ ಮಗ ಮೂವರು ಹೆಣ್ಣುಮಕ್ಕಳು. ತುಂಬು ಸಂಸಾರದ ಜೀವನ, ತೃಪ್ತಿಕರ ಬದುಕು ಇವರದಾಗಿತ್ತು. ೧೯೯೪ರಲ್ಲಿ ಕಾವ್ಯಾನಂದರು ನಿಧನರಾದರು.

ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ಸೇರಿದ ದ್ಯಾಂಪುರ–ಯಲಬುರ್ಗಾ ತಾಲೂಕ ಅತ್ಯಂತ ಹಿಂದುಳಿದ ಗ್ರಾಮ. ಇಂತಹ ಹಿಂದುಳಿದ ಪ್ರದೇಶದಲ್ಲಿ ಜನಿಸಿ, ಬಡತನದಲ್ಲಿ ವಿದ್ಯಾಭ್ಯಾಸ ಮಾಡಿ ನಿಜಾಂ ಆಳ್ವಿಕೆಯಲ್ಲಿ ಉನ್ನತ

ಹುದ್ದೆ ಹೊಂದಿದ ಸಿದ್ಧಯ್ಯ ಪುರಾಣಿಕರು ಇಂದಿನ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾರೆ.

ಇವರು ಕೇವಲ ಒಬ್ಬ ಅಧಿಕಾರಿಯಾಗಿರಲಿಲ್ಲ, ಕನ್ನಡದ ಕಟ್ಟಾಳು ವಾಗಿದ್ದರು. ಅಧಿಕಾರಿಯಾಗಿದ್ದುಕೊಂಡೇ ದೊಡ್ಡ ಸಾಹಿತಿಗಳಾಗಿ ಬೆಳೆದು ನಿಂತರು. ಮಾನ್ವಿ ನರಸಿಂಗರಾಯರು, ತವಗ ಭೀಮಸೇನರಾಯರು, ಪಿ.ಬಿ.ದೇಸಾಯಿಯವರು, ಡಿ.ಕೆ.ಭೀಮಸೇನ್ ರಾಯರು ಇವರ ಗುರುಗಳಾಗಿದ್ದರು.

ಕಾವ್ಯಾನಂದರದು ಸಾಹಿತ್ಯಕ್ಷೇತ್ರದಲ್ಲಿ ದೊಡ್ಡ ಹೆಸರು. ಕಾವ್ಯ, ವಚನ, ನಾಟಕ, ಸಣ್ಣಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ, ಜೀವನಚರಿತ್ರೆ, ಆತ್ಮಚರಿತ್ರೆ, ಸಣ್ಣಕಥೆ, ಗ್ರಂಥ ಸಂಪಾದನೆ ಹೀಗೆ ಹಲವು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿರುವ ಇವರು ಐವತ್ತು ಕೃತಿಗಳನ್ನು ರಚಿಸಿದ್ದಾರೆ. ಆಧುನಿಕ ವಚನಕಾರರಲ್ಲಿ ಕಾವ್ಯಾನಂದರ ಹೆಸರು ಪ್ರಮುಖವಾದುದಾಗಿದೆ. ಇವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಳವಾಡ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿಗಳು ದೊರಕಿವೆ.

ಕರ್ನಾಟಕ ಗಾಂಧಿಯೆಂದೇ ಹೆಸರಾಗಿದ್ದ ಹರ್ಡೇಕರ ಮಂಜಪ್ಪನವರ ಸಾಮಿಪ್ಯ ಇವರಿಗೆ ದೊರಕಿತು. ಹೀಗಾಗಿ ಇವರಲ್ಲಿ ಸಮಾಜ ಸೇವೆಯ ಪರಿಕಲ್ಪನೆ ಬೆಳೆಯಿತು. ಸಾಹಿತ್ಯದ ಇವರ ಸೇವೆಯನ್ನು ಗುರುತಿಸಿ ೧೯೭೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಇವರಿಗೆ ಗೌರವ ಡಾಕ್ಟರ್ ಪದವಿ ನೀಡಿ ಗೌರವಿಸಿತು. ೧೯೮೭ರಲ್ಲಿ ಕಲಬುರ್ಗಿಯಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಕಾವ್ಯಾನಂದರು ಅಧ್ಯಕ್ಷರಾಗಿದ್ದರು. ೧೯೮೧ರಲ್ಲಿ ಪ್ರೊ.ಸಾ.ಸಿ. ಮರುಳಯ್ಯ ಅವರ ಸಂಪಾದಕತ್ವದಲ್ಲಿ "ಕಾವ್ಯಾನಂದ" ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು. ಇವರ ಹೆಸರಲ್ಲಿ ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ ಸ್ಥಾಪಿಸಿ ಪ್ರತಿ ವರ್ಷ ಕಾವ್ಯಾನಂದ ಪ್ರಶಸ್ತಿ ನೀಡಲಾಗುತ್ತದೆ.

## ಅನುಬಂಧ – II
## ಕಾವ್ಯಾನಂದರ ಕೃತಿಗಳ ವಿವರ

**I ಕಾವ್ಯ**

೧. ಜಲಪಾತ – ೧೯೫೨
೨. ಕರುಣಾಶ್ರಾವಣ – ೧೯೫೫
೩. ಮಾನಸ ಸರೋವರ – ೧೯೫೯
೪. ಕಲ್ಲೋಲ ಮಾಲೆ – ೧೯೬೮
೫. ಮೊದಲು ಮಾನವನಾಗು – ೧೯೬೯
೬. ಚರಗ – ೧೯೮೭
೭. ಹಾಲ್ದೆನೆ – ೧೯೯೦
೮. ಮರುಳ ಸಿದ್ಧನ ಕಂತೆ – ೧೯೯೧
೯. ವಿಕಾಸ ವಾಣಿ

**II ವಚನ**

೧. ವಚನೋದ್ಯಾನ – ೧೯೭೭
೨. ವಚನ ನಂದನ – ೧೯೮೩
೩. ವಚನರಾಮ – ೧೯೯೨

**III ನಾಟಕ**

೧. ಸ್ತ್ರೀ
೨. ಬೆಳವಡಿ ಮಲ್ಲಮ್ಮ
೩. ಸಮರತಿ
೪. ಆತ್ಮಾರ್ಪಣ

೫. ಭಾರತವೀರ
೬. ರಜತ ರೇಖೆ
೭. ಭಗ್ನನೂಪುರ

**IV ಸಣ್ಣಕಥೆ**
೧. ಕಥಾಮಂಜರಿ
೨. ತುಷಾರಹಾರ

**V ಕಾದಂಬರಿ**
೧. ತ್ರಿಭುವನಮಲ್ಲ

**VI ಮಕ್ಕಳ ಸಾಹಿತ್ಯ**
೧. ತುಪ್ಪ-ರೊಟ್ಟಿ ಗೇ ಗೇ ಗೇ
೨. ಗಿಲ್ ಗಿಲ್ ಗಿಲಗಚ್ಚಿ
೩. ತಿರುಗಲೆ ತಿರುಗಲೆ ತಿರುಗುಯ್ಯಾಲೆ
೪. ನ್ಯಾಯ-ನಿರ್ಣಯ
೫. ಸಿದ್ಧರಾಮ
೬. ಮಿರ್ಜಾ ಗಾಲಿಬ್

**VII ಜೀವನ ಚರಿತ್ರೆ**
೧. ಶರಣ ಚರಿತಾಮೃತ
೨. ಬಸವಣ್ಣನವರ ಜೀವನ ಹಾಗೂ ಸಂದೇಶ
೩. ಮಹಾದೇವಿಯಕ್ಕ
೪. ಅಲ್ಲಮಪ್ರಭು
೫. ನಜೀರ್ ಅಕಬರಾದಿ(ಅನುವಾದ)
೬. ಹರ್ಡೇಕರ್ ಮಂಜಪ್ಪ

**VIII ಆತ್ಮಚರಿತ್ರೆ**
೧. ನನ್ನ ನಿನ್ನೆಗಳೊಡನೆ ಕಣ್ಣುಮುಚ್ಚಾಲೆ



**IX ಸಂಪಾದನೆ**
೧. ಸುಬೋಧಸಾರ
೨. ಶ್ರೀಕಾರ
೩. ಕನ್ನಡ ಪದ್ಮ ರತ್ನಾಕರ
೪. ಮಳೆಯರಾಜ ಚಾರಿತ್ರ್ಯ
೫. ಕನಕದಾಸ ಪ್ರಶಸ್ತಿ
೬. ಶರಣ ಪ್ರಸಾದ
೭. ಸಿದ್ಧಗಂಗಾಶ್ರೀ
೮. ಮಣಿಹ
೯. ಬಸವ ಮತ್ತು ದಲಿತೋದಯ
೧೦. ಬಸವ ಮತ್ತು ವಿಚಾರವಾದ
೧೧. ಬಸವ ದರ್ಶನ

**X ಇತರ**
೧. ತಿಂಗಳಿನಿಂದ ಮಂಗಳನತ್ತ
೨. ಪ್ರಬಂಧ ಮಾಲೆ
೩. ಗ್ರಾಮಸ್ವರಾಜ್ಯ

## ಪ್ರಚಾರೋಪನ್ಯಾಸ ಮಾಲೆ ಪ್ರಕಟಣೆಗಳು

| | |
|---|---|
| ಆರ್ಥಿಕ ಅಭಿವೃದ್ಧಿಯಲ್ಲಿ ಅಸಂಘಟಿತ ಕಾರ್ಮಿಕರು | ಡಾ. ಶರಣಪ್ಪ ಸೈದಾಪೂರ |
| ಮಹಿಳಾ ಹರಿದಾಸರು | ಡಾ. ಶೀಲಾಕುಮಾರಿ ದಾಸ |
| ವರದಕ್ಷಿಣೆ : ಒಂದು ಸಾಮಾಜಿಕ ಸಮಸ್ಯೆ | ಶೋಭಾದೇವಿ ಚೆಕ್ಕಿ |
| ಕಡಕೋಳ ಮಡಿವಾಳಪ್ಪನವರ ಸಾಹಿತ್ಯ | ಡಾ. ಬಸವರಾಜ ಸಬರದ |
| ಕೃಷಿ ಮತ್ತು ಸರಕಾರ | ಡಾ. ಬೊಕ್ಕಲ್ ನಾಗೇಂದ್ರಪ್ಪಾ |
| ಮುದಗಲ್ ಮೊಹರಂ | ಡಾ. ಕೆ. ಶಶಿಕಾಂತ |
| ಹೈದ್ರಾಬಾದ ಕರ್ನಾಟಕ ಮಾಧ್ಯಮ | ಡಾ. ಶಿವರಾಮ ಅಸುಂಡಿ |
| ಕೋಳೂರು ವಿರುಪಾಕ್ಷಪ್ಪ ಗೌಡರು | ಶುಭಾ ಎಸ್. ಸಗರದ |
| ಭಾರತೀಯ ವಾಣಿಜ್ಯ ವ್ಯವಸ್ಥೆ | ಶಾಂತಕುಮಾರ ಸಂಗೊಳಗಿ |
| ಶ್ರೀ ವಿ.ಎಸ್. ಕಾಂತನವರ | ಡಾ. ಅರುಣಾ ಹಿರೇಮಠ |
| ಮಹಿಳೆ ಮತ್ತು ಜನಪದ ಕ್ರೀಡೆಗಳು | ಜಾನಕಿ ಹೊಸೂರ |
| ರಾಯಚೂರು ಜಿಲ್ಲೆಯ ಜನಪದ ರಂಗಭೂಮಿ | ಡಾ. ಲಿಂಗಣ್ಣ ಗಾಣಧಾಳ |
| ರಾಯಚೂರು ಜಿಲ್ಲೆಯ ದಾಸರ ಬಯಲಾಟಗಳು | ಡಾ. ರಾಜಶ್ರೀ ಕಲ್ಲೂರಕರ್ |
| ಕನ್ನಡ ಸಾಹಿತ್ಯ ವಿಮರ್ಶೆ | ಡಾ. ಜಿ.ಆರ್. ತಿಪ್ಪೇಸ್ವಾಮಿ |
| ಕಾವ್ಯಾನಂದರ ವಚನದ ಹೊಸ ಓದು | ಡಾ. ಬಸವರಾಜ ಸಬರದ |
| ಛತ್ರಪತಿ ಶಾಹೂ ಮಹಾರಾಜ | ಡಾ. ಎಚ್.ಟಿ. ಪೋತೆ |

ಪ್ರಸಾರಾಂಗ
**ಗುಲಬರ್ಗಾ ವಿಶ್ವವಿದ್ಯಾಲಯ**
ಕಲಬುರಗಿ-೫೮೫ ೧೦೬